Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೨೯ | ತಾರೀಕು ೨೧–೭–೧೯೬೦ನೇ ಶುಕ್ರವಾರ | ಸಂಚಿಕೆ ೭

ಬೀಹಾರದ ಪೂರ್ನಿಯಾ ಎಂಬ ಜಿಲ್ಲೆಯಲ್ಲಿ ವಿಪರೀತ ಆಹಾರ ಕ್ಷಾಮವು ತಲೆದೋರಿ ಉಪವಾಸದಿಂದ ಇಪ್ಪತ್ತಕ್ಕೂ ಹೆಚ್ಚು ಹದಿನೈದಕ್ಕೆ ಮೇಲ್ಪಟ್ಟು ಮರಣಗಳು ಸಂಭವಿಸಿವೆ. ಮುಸಲ ಧಾರೆಯಿಂದ ಬೆಳೆ ಸುರಿದ ಪರಿಣಾಮವಾಗಿ ಅಕ್ಕಿಯ ಬೆಲೆ ಸಣಬಿನ ಪೈರೂ ಸಂಪೂರ್ಣ ನಾಶವಾಗಿ ಈ ಕ್ಷಾಮ ತಲೆದೋರಿದುವಾಗಿದೆ. ಅಕ್ಕಿಯ ಬೆಲೆ ಮುಗಿಲುಮುಟ್ಟಿದೆ. ಕೆಲವು ಕಡೆಗಳಲ್ಲಿ ಸಣಕ್ಕೆ ಳಂ ರೂಪಾಯಿ ಪ್ರಕಾರ ಅಕ್ಕಿ ಮಾರಾಟವಾಗುತ್ತದೆ. ಇನ್ನೂ ಧಾರಣೆ ಏರುವ ಲಕ್ಷಣಗಳು ಕಂಡುಬಂದಿವೆ.

ಕಲ್ಕತ್ತದ ಈಗಿನ ಜನಸಂಖ್ಯೆ ಸುಮಾರು ಸಲ್ವತ್ತು ಲಕ್ಷದಷ್ಟಿರಬಹುದೆಂದು ಇತ್ತೀಚೆಗೆ ತೆಗೆದ ಕಟ್ಟಡಗಳ 'ಎಸೆಸ್‌ಮೆಂಟ್' ಅಂಕಿಸಂಖ್ಯೆಗಳಿಂದ ತಿಳಿದುಬಂದಿದೆ.

ಭಾರತದಲ್ಲಿ ದೇಶದ ಆದ್ಯಂತ ಹರಡಿಕೊಂಡಿರುವ ಎಂಪ್ಲೊಯ್‌ಮೆಂಟ್ ಎಕ್ಸ್‌ಚೇಂಜ್ ಸಂಸ್ಥೆಗಳು ಕಳೆದ ಮೇ ತಿಂಗಳಲ್ಲಿ ಒಟ್ಟು ೨೯,೪೩೪ ಮಂದಿಗೆ ಉದ್ಯೋಗ ದೊರಕಿಸಿಕೊಟ್ಟವು. ಈ ಸಂಖ್ಯೆ ಹಿಂದಿನ ತಿಂಗಳ ಸಂಖ್ಯೆಗಿಂತ ಸುಮಾರು ಕೇಳ ಪ್ರಮಾಣದಷ್ಟು ಹೆಚ್ಚು ಎಂದು ತಿಳಿದುಬರುತ್ತದೆ.

೩೦ ವರ್ಷಗಳ ಸೇವೆ

ಪ್ರಗತಿಯ ಹೆಗ್ಗುರುತುಗಳು.

- ೧೯೪೯ರಲ್ಲಿ ಕಂಪೆನಿಯ ಹೊಸ ವ್ಯಾಪಾರವು ಶೇಕಡಾ ೧೦೬ರಷ್ಟು ಹೆಚ್ಚಾಗಿರುವುದು.
- ಒಂದು ವರ್ಷದ ಹಿಂದೆ ಅದರ ವಸೂಲು ಖಂಡವಾಳವು ರೂ. ೫,೫೦,೦೦೦ ಆಗಿತ್ತು. ಇಂದಿಗೆ ಅದು ರೂ. ೧೧,೯೧,೦೦೦ಕ್ಕೆ ಏರಿದೆ. ಅಂದರೆ ಶೇಕಡಾ ೧೧೭ರಷ್ಟು ವೃದ್ಧಿ.
- ಕಂಪೆನಿಯ ಶಾಖೆಗಳು ಭಾರತದ ಎಲ್ಲ ದೊಡ್ಡ ನಗರಗಳಲ್ಲಿಯೂ ಹರಡಿವೆ.

ಕಂಪೆನಿಯು ತೀವ್ರವಾಗಿ ವಿಸ್ತಾರವಾಗುತ್ತಿದೆ. ಸ್ಪರ್ಧಿತ ಸಮಾಜದಲ್ಲಿ ಸಂಬಂಧಪಟ್ಟುಕೊಂಡವರು ನಮ್ಮನ್ನು ಸೇರಿಕೊಂಡರೆ ಅವರಿಗೆ ಜಯ ನಿಶ್ಚಯ.

CRESCENT INSURANCE BUILDING, MADRAS



CRESCENT INSURANCE BUILDING, GAMDEVI, BOMBAY



HEAD OFFICE:— 'CRESCENT CHAMBERS', BOMBAY

The CRESCENT INSURANCE CO. LTD.,
(ESTABLISHED 1919)
Head Office: CRESCENT CHAMBERS, Tamarind Lane, Fort, Bombay.
No. 504

ದಿ ಕ್ರೆಸೆಂಟ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್.,
(ಸ್ಥಾಪನೆ: ೧೯೧೯.)
ಪ್ರಧಾನ ಆಫೀಸು
"ಕ್ರೆಸೆಂಟ್ ಚೇಂಬರ್ಸ್"
ಬೊಂಬಾಯಿ.

ಚೇರ್‌ಮೆನ್
ಶ್ರೀ ಪ್ರಭಾಶಂಕರ ರಾಮಚಂದ್ರ ಭಟ್,
ಜೆ. ಪಿ.

ಮ್ಯಾನೇಜಿಂಗ್ ಡೈರೆಕ್ಟರ್:
ಶ್ರೀ ಎ.ಂ ಸುಂದರರಾಂ ಶೆಟ್ಟಿ.

ಜನರಲ್ ಮ್ಯಾನೇಜರ್:
ಶ್ರೀ ಎಂ. ರಾಮರಾವ್, ಬಿ. ಎ,
ಬಿ. ಎಲ್., ಜೆ. ಪಿ.

ಎಲ್ಲಾ ತರಹೆಯ ಜೀವ ವಿಮಾ ನಡೆಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬಿ. ಎ. ಪೂವಯ್ಯ,
ಆರ್ಗನೈಸರ್
ಪೊಳ್ಳೆಬೆಟ್ಟ, ಕೊಡಗು.

ಶಾಖಾ ಖಚೇರಿ: (ನೈಸೂರು ಸಂಸ್ಥಾನ, ಕೊಡಗು ಮತ್ತು ರಾಯಲ ಸೀಮೆಗಾಗಿ)
ನಂ. ೨೨ ಬಿ. ಮಹಾತ್ಮಾ ಗಾಂಧಿ ರೋಡ್,
ಬೆಂಗಳೂರು ೧.

Telephone No. 424 Telegram "LifeInsure" BANGALORE.

ಸ್ವತಂತ್ರ ಸ್ಥಾನವುಳ್ಳ ಮತ್ತು ಶೀಖ ಜಾಬೀ ರಾಷ್ಟ್ರವನ್ನು ಸ್ಥಾಪಿಸಬೇಕೆಂಬ ಸಿಂಗರು ದಿಲ್ಲಿಯಲ್ಲಿ ೧೦ನೇ ದಿನಾಂಕ ಕೂ
ಆಡಿ ಸ್ವಯಂ ನಿರ್ಣಯಾಧಿಕಾರವುಳ್ಳ ೫೦ ತಮ್ಮ ಬೇಡಿಕೆಯನ್ನು ಮೂಸ್ಟರ್ ತಾರಾ ಡಿದ ಒಂದು ಜಾಹೀರ ಸಭೆಯಲ್ಲಿ ಹೇಳಿದರು.

ಅದೃಷ್ಟಹೀನ ಕೊರಿಯಾ.

ಶ್ರೀ. ಕೆ. ಘ. ಮಶ್ರೂವಾಲಾ ಅವರಿಂದ.

ಪ್ರಬಲ ರಾಷ್ಟ್ರಗಳ ರಾಜ್ಯತೃಷ್ಣೆಗೆ ಕಳೆದ ಅರ್ಧ ಶತಮಾನದಿಂದಲೂ ಕೊರಿಯವನ್ನು ದುಃಖಕ್ಕೊಳಗು ಮಾಡಿದೆ. ಮೊದಲು ಮಂಚೂರಿಯದ ಕಾಟದಿಂದ ಅದಕ್ಕೆ ಶಾಂತಿಯಿರಲಿಲ್ಲ. ಆ ಮೇಲೆ ಜಪಾನು ಅದನ್ನು ಜಯಿಸಿ ಅದರ ಪ್ರಜೆಗಳನ್ನು ಹಿಂಸಿಸಿ ಅದರ ಪ್ರಕೃತಿ ಸಂಪತ್ತನ್ನು ತನ್ನ ಲಾಭಕ್ಕೆ ವಿನಿಯೋಗಿಸಿಕೊಂಡಿತು. ಜಪಾನು ಸೋತಾಗ ಕೊರಿಯವ್ವ ರದೇನೂ ತಪ್ಪಿಲ್ಲದಿದ್ದರೂ ಅವರು ವಿಜಯಿ ರಾಷ್ಟ್ರಗಳ ದಾಸ್ಯಕ್ಕೊಳಗಾಗಬೇಕಾಯಿತು. ಈ ರಾಷ್ಟ್ರಗಳು ತಮ್ಮ ಸ್ವಾರ್ಥಕ್ಕಾಗಿ ಕೊರಿಯವನ್ನು ಇಬ್ಭಾಗ ಮಾಡಿ ಎಂದಿಗೂ ಹೊಂದಿಕೊಳ್ಳಲಾರದ ವಿಸರೀತ ಪದ್ಧತಿಗಳ ಸರಕಾರವನ್ನು ಸ್ಥಾಪಿಸಿದವು. ಇದೆಲ್ಲವನ್ನೂ ಕೊರಿಯನ್ನರ ಒಪ್ಪಿಗೆಯಿಲ್ಲದೆಯೇ ಮಾಡಲಾಯಿತು. ಈ ವಿಜಯ ಕಳೆದ ಶತಕದಲ್ಲಿ ನಡೆದುದಾಗಿದ್ದರೆ ಆಗ ಅಮೇರಿಕದ ಸಂಯುಕ್ತ ಸಂಸ್ಥಾನವು ಫಲಿಪೈನ್ಸ್ ದ್ವೀಪಗಳನ್ನು ಮಾಡಿದಂತೆ, ಜಪಾನು ಮತ್ತು ದಕ್ಷಿಣ ಕೊರಿಯವನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡು ಬಿಡುತ್ತಿತ್ತು. ಅದೇ ಪ್ರಕಾರ ಉತ್ತರ ಕೊರಿಯ ಸೋವಿಯೇಟ್ ರಷ್ಯಾದಲ್ಲಿ ಸೇರಿ ಹೋಗುತ್ತಿತ್ತು. ಆದರೆ ಈ ಶತಮಾನದಲ್ಲಿ ಹೊಸ ನೈತಿಕ ವಿಚಾರಗಳು ಬೆಳೆದು ಬಂದಿವೆ. ಅವು ರಾಜ್ಯ ವಿಸ್ತರಣ ನೀತಿಗೆ ಪ್ರತಿಕೂಲವಾಗಿವೆ. ಅವು ಸಾಮ್ರಾಜ್ಯವಾದಿಗಳಿಗೆ ಕಾಲ್ತೊಡಕಾಗುವಷ್ಟು ಜನ ಪ್ರಿಯವಾಗಿದೆ.

ಹಾವು ಮುಂಗುಸಿಗಳ ಸಂಧಿ.

ಮುಸೊಲಿನಿ ಮತ್ತು ಹಿಟ್ಲರರಂತೆ ಪ್ರಜಾತಾಂತ್ರಿಕ ಸಾಮ್ರಾಜ್ಯವಾದಿಗಳು ಈ ಹೊಸ ವಿಚಾರಗಳನ್ನು ಕಣ್ಣಲ್ಲಿ ಬೊಟ್ಟು ಚುಚ್ಚಿದಂತೆ ನಿರ್ದಾಕ್ಷಿಣ್ಯವಾಗಿ ನಿರಾಕರಿಸಲಾರರು. ಆದುದರಿಂದ ಅವರು ಕುಟಿಲ ಮಾರ್ಗವನ್ನನುಸರಿಸಬೇಕಾಗಿದೆ. ನೇರವಾಗಿ ಜರ್ಮನಿ, ಜಪಾನು ಮತ್ತು ಕೊರಿಯಗಳ ಅಂಶಗಳನ್ನು ತಂತಮ್ಮ ರಾಜ್ಯಗಳಿಗೆ ಸೇರಿಸಿಕೊಂಡು ಬಿಡುವ ಬದಲು ಅವುಗಳನ್ನು ಬೇರೆ ಬೇರೆ ಅ ದೇಶಗಳ ಅಧೀನದಲ್ಲಿ, ಪುನಃ ಆಯಾ ಪ್ರಜೆಗಳ ವಶಕ್ಕೆ ಬಿಟ್ಟುಕೊಡಲು ಅನುಕೂಲ ಸಮಯ ಬಂದಿದೆಯೆಂದು (ವಿಜಯಿಗಳಿಗೆ) ತೋರುವ ವರೆಗೆ, ಇರಿಸಲಾಯಿತು.

ಜರ್ಮನಿಯನ್ನೂ ಕೊರಿಯವನ್ನೂ ತುಂಡು ತುಂಡು ಮಾಡಿದಾಗ ಈ ದೇಶಗಳ ಜನರಿಗೆ ಈ ಬಗೆಯಲ್ಲಿ ತಮ್ಮ ನಾಡುಗಳು ಚೂರುಚೂರಾಗುವುದು ಖಂಡಿತವಾಗಿಯು ಸೇರಿಕೆಯಾಗಲಾರದೆಂಬುದು ಸ್ಪಷ್ಟವಾಗಿರಬೇಕು. ಅವುಗಳಲ್ಲಿ ಪ್ರತಿಯೊಂದು ದೇಶವೂ ಅಖಂಡವಾಗಿತ್ತು. ಒಂದೇ ಭಾಷೆ, ಒಂದೇ ಧರ್ಮ, ಒಂದೇ ವಿಚಾರಧಾರೆ ಅಲ್ಲಲ್ಲಿಯ ಪ್ರಜೆಗಳನ್ನು ಒಂದುಗೂಡಿಸಿದ್ದವು. ಪರಾಧೀನವಾಗುವ ಮೊದಲು ಅವು ಒಂದೇ ಆಗಿದ್ದವು ಮತ್ತು ಅನಂತರವೂ ಒಂದೇ ಆಗಿ ಉಳಿಯಲು ಬಯಸುತ್ತಿದ್ದವು. ಕೊರಿಯನ್ನರ ಮಟ್ಟಿಗೆ ಹೇಳಬೇಕಾದರೆ, ಅವರಿಂದೂ ಸ್ವೇಚ್ಛೆಯಿಂದ ಯುದ್ಧದಲ್ಲಿ ಭಾಗಿಗಳಾಗಿರಲಿಲ್ಲ. ಅವರ ಅರಸರಾದ ಜಪಾನೀಯರ ಕಾರಣದಿಂದಲೇ ಕೊರಿಯನ್ನರು ಯುದ್ಧದಲ್ಲಿ ಸಿಲುಕಿಕೊಂಡರು. ಈ ಜಗತ್ತಿನಲ್ಲಿ ಮಾನವಹಿತವನ್ನು ಹೇಗೆ ಸಾಧಿಸಬಹುದೆಂಬ ಬಗ್ಗೆ ರಷಿಯಕ್ಕೂ ಪ್ರಜಾತಂತ್ರಗಳೆನಿಸಿಕೊಳ್ಳುವ ಇನ್ನೊಂದು ಪಕ್ಷಕ್ಕೂ ಸರ್ವಥಾ ಭಿನ್ನವಾದ ಅಭಿಪ್ರಾಯಗಳುಂಟೆಂಬುದೂ ಗೊತ್ತೇ ಇತ್ತು. ರಷಿಯವ್ವೂ ಪ್ರಜಾತಂತ್ರ ದೇಶಗಳೂ ಜರ್ಮನಿ, ಇಟಲಿ ಮತ್ತು ಜಪಾನುಗಳನ್ನು ಸೋಲಿಸಲು ಹೇಗೋ ಒಟ್ಟಾಗಿದ್ದರೂ ಅವುಗಳೊಳಗಿನ ಪರಸ್ಪರ ವೈಷಮ್ಯವು ಅವುಗಳಗೂ ಪರಾಜಿತ ಶತ್ರುಗಳಿಗೂ ಇದ್ದುದಕ್ಕಿಂತ ಕಡಿಮೆಯಾಗಿದ್ದಿಲ್ಲ. ವಸ್ತುತಃ ಮುಂಗನನ್ನು ಸೋಲಿಸಲು ಹಾವಿಗೂ ಮುಂಗುಸಿಗೂ ಆದ ಒಪ್ಪಂದದಂತಿತ್ತು ಅವರ ಐಕ್ಯ. ಮುಂಗ ಸೋತ ಮೇಲೆ ಹಾವೂ ಮುಂಗುಸಿಯೂ ತಮ್ಮ ಹಳೆಯ ಹಗೆತನವನ್ನು ಸಾಧಿಸಲು ಸ್ವತಂತ್ರವಾಗಿವೆ ಈಗ.

ಪ್ರಜಾತಂತ್ರಗಳ ಭೀತಿ.

ಅಮೇರಿಕದ ನೇತೃತ್ವದಲ್ಲಿರುವ ಪ್ರಜಾತಂತ್ರಗಳಿಗೂ ರಷಿಯದ ಅಧೀನದಲ್ಲಿರುವ ಕಮ್ಯೂನಿಸ್ಟ್ ದೇಶಗಳಿಗೂ ಇದ್ದ ದ್ವೇಷವು ಪ್ರಕಟರೂಪದಲ್ಲಿ ಬೆಳೆಯು ಎಷ್ಟೋ ಕಾಲವಾಗಿಬಿಟ್ಟಿದೆ. ಸೋವಿಯಟ್ ರಷಿಯವು ತಮಗೆ ಈ ಜಗತ್ತಿನಲ್ಲೊಂದು ಅವತಾರಕಾರ್ಯವುಂಟೆಂದು ಭಾವಿಸುತ್ತದೆ. ಪ್ರಾಚೀನ ಕ್ರೈಸ್ತನ್ ವಿಶನರಂಗಳಂತೆ ಮತ್ತು ಪ್ರಾಚೀನ ಮುಸ್ಲಿಮರಂತೆ ಕಮ್ಯೂನಿಸ್ಟರೂ ಮಾನವ ಕುಲದ ಉದ್ಧಾರಪಡಬೇಕಾದರೆ ತಮ್ಮ ಮತದ ಜೀವನ ಪದ್ಧತಿಯನ್ನನುಸರಿಸುವುದೊಂದೇ ಉಪಾಯವೆಂದು ಬಗೆಯುತ್ತಾರೆ. ಹಾಗೆಯೆ, ಎಲ್ಲ ಧರ್ಮಾಂಧ ಮತಪ್ರಸಾರಕರಂತೆ ಇವರೂ ಸಾಧನಶುದ್ಧಿಯಲ್ಲಿ ವಿಶ್ವಾಸವಿಡದೆ, ಧ್ಯೇಯಸಾಧನೆಗಾಗಿ ಬೇಕಾದ ಯುಕ್ತಿಗಳನ್ನು ಕೂಡ ಹೂಡಲು ಸಿದ್ಧರಾಗಿದ್ದಾರೆ. ಅತ್ತ ಪ್ರಜಾತಂತ್ರಗಳೋ, ಕಮ್ಯೂನಿಜಮಿನ ಪ್ರಸಾರದಿಂದ ತಮ್ಮ ಸುಖಕ್ಕೆ ಅತಂಕಬರುವುದೆಂದು ನಂಬಿವೆ. ಪ್ರಜಾತಂತ್ರಗಳಲ್ಲಿ ಬಹಳ ಪ್ರಗತಿ ಹೊಂದಿದ ಶ್ರೀಮಂತವಾದ ರಾಜ್ಯಗಳು ತಮ್ಮಲ್ಲಿನ ಜೀವನದ ಮಟ್ಟವನ್ನು ಎಷ್ಟು ಮಟ್ಟಿಗೆ ಏರಿಸಿಕೊಂಡಿವೆಯೆಂದರೆ, ಸ್ವತಃ ತಮ್ಮ ದೇಶದ ಬಡಪರೊಡನೆ ಕೂಡ ಸಂಪತ್ತನ್ನು ಸಮಾನವಾಗಿ ಹಂಚುವುದಂತೂ ದೂರ ಉಳಿಯಿತು, ಸಮಂಜಸವಾಗಿ ಹಂಚಿದರು ಕೂಡ, ಆ ಮೇಲ್ಮಟ್ಟದ ಜೀವನ ಸೌಕರ್ಯಗಳನ್ನು ಉಳಿಸಿಕೊಳ್ಳುವುದು ಅಸಾಧ್ಯವೆಂದು ಕಂಡುಕೊಂಡಿವೆ. ತಮ್ಮ ಸಂಪತ್ತನ್ನು ಜಗತ್ತನ್ನು ಜಗತ್ತಿನ ಬೇರೆ ಬಡ ದೇಶಗಳೊಡನೆ ಹಂಚಿಕೊಳ್ಳುವುದಂತೂ ಕಲ್ಪನಾತೀತ. ಮತ್ತು ಕಮ್ಯೂನಿಸ್ಟ್ ವಿಚಾರಗಳು ಹಬ್ಬಿದವೆಂದರೆ ಇವೆರಡೂ ಬಂದಂತೆಯೇ ಸೈ. ಹೊಸ ಆರ್ಥಿಕ ವ್ಯವಸ್ಥೆಯನೊಬ್ಬನ ಧರ್ಮಕ್ಕೆ ಜನರು ಸೇರಿಕೊಂಡರೆ ಹಳೆ ಸಂಪ್ರದಾಯದ ಪುರೋಹಿತರೂ ಪೂಜಾರಿಗಳೂ ತಮ್ಮ ವೃತ್ತಿ ಕಳೆದು ಹೋಗುವುದೆಂದು ಅಂಜುವ ಹಾಗೆ ಇವರೂ ಅಂಜುತ್ತಾರೆ ತಮ್ಮ ಪ್ರಸ್ತುತ ಸ್ಥಿತಿ ನೈತಿಕ ದೃಷ್ಟಿಯಿಂದ ಎಳ್ಳಷ್ಟೂ ನ್ಯಾಯವಲ್ಲೆಂದು ಅವರಿಗೆ ಗೊತ್ತಿದೆ. ಆದರೆ ಆ ಸ್ಥಿತಿಯನ್ನು ಕಾಪಾಡಿಕೊಳ್ಳಬೇಕೆಂದು ಅವರ ಆಸೆ. ಅದಕ್ಕಾಗಿ ಹೊಸ ವಿಚಾರಧಾರೆಯನ್ನು ಸಕಾಲದಲ್ಲೇ ಮುರಿದು ಹಾಕಲು ತಾವೆಲ್ಲರೂ ಒಮ್ಮತದಿಂದ ಹೆಣಗಬೇಕಾಗಿದೆಯೆಂದು ಅವರಿಗನಿಸುತ್ತದೆ. ಅವರಿಗಾದರೂ ಸಾಧನಶುದ್ಧಿಯಲ್ಲಿ ನಂಬಿಕೆಯಿಲ್ಲ. ರಷಿಯಕ್ಕಿಂತ ಅವರು ಶ್ರೀಮಂತರೂ ಸುಸಂಘಟಿತರೂ ಆಗಿರುವುದಲ್ಲದೆ ತಮ್ಮಲ್ಲಿ ಹೆಚ್ಚು ಭಯಾನಕವಾದ ಯುದ್ಧ ಸಾಮಗ್ರಿಗಳನ್ನೆಯೆಂಬ ಭರವಸೆಯೂ ಅವರಿಗಿದೆ. ಅದು ಹಿಂದೆ ಹಮ್ಮೂನಿಸ್ಟರು ತೀರ ಬಲಿಷ್ಠರಾಗುವ ಮೊದಲೇ ಅವರೊಡನೆ ಏನಾದರೊಂದು ನೆವದಿಂದ ಜಗಳ ಕೆದರಲು ಇವರ ಅತುರ. ಹೀಗೆ ಎರಡೂ ಪಕ್ಷಗಳಿಗೂ ಒಪ್ಪೆ ಶಕ್ತಿ ಪರೀಕ್ಷೆ ಮಾಡಿಬಿಡುವ ಇಚ್ಛೆಯುಂಟೆಂದು ತೋರುತ್ತದೆ. ಕೊರಿಯ ಮತ್ತು ಜರ್ಮನಿ ಇವೆರಡೂ ತಿಂಡಿ ನೆವವನ್ನು ಕೊಡಲು ಸಮರ್ಥವಾಗಿದ್ದವು. ಈಗಾಗಲೆ ಕೊರಿಯವು ಅದನ್ನೊದಗಿಸಿದೆ. ಜರ್ಮನಿಯಲ್ಲಿಯೂ ಒಂದು ನಿಮಿತ್ತ ದೊರೆಯಲು ಬಹಳ ವಿಲಂಬವಾಗದು. ಅಥವಾ ದಕ್ಷಿಣ ಕೊರಿಯ ಮತ್ತು ಜಪಾನಗಳ ರಕ್ಷಣೆಗಾಗಿ ಸೋವಿಯಟ್ ನಿಯಂತ್ರಿತ ಜರ್ಮನಿಯ ಮೇಲೆ ಅಕ್ರಮಣ ಹೂಡುವಷ್ಟು ಯುದ್ಧ ನೀತಿಯಲ್ಲಿ ಅವಶ್ಯಕವೆನಿಸಬಹುದು.

ಕುಸಂಧಿಗಳು.

ಎರಡನೇ ಮಹಾಯುದ್ಧಕ್ಕಿಂತ ಮುಂಚೆ ಪ್ರಜಾತಂತ್ರ ರಾಷ್ಟ್ರಗಳು ರಷಿಯದ ವಿರುದ್ಧ ನಾಜಿಗಳೊಡನೆಯೂ ಫ್ಯಾಸಿಸ್ಟರೊಡನೆಯೂ ಕುಸಂಧಿಯನ್ನು ಮಾಡಿಕೊಂಡಿದ್ದವು. ಯುದ್ಧಾರಂಭಕಾಲದಲ್ಲಿ ಫ್ಯಾಸಿಸ್ಟರೂ ನಾಜಿಗಳೂ ರಷಿಯದೊಡನೆ ಕುಸಂಧಿಯನ್ನು ಮಾಡಿಕೊಂಡು ಪ್ರಜಾತಂತ್ರಗಳನ್ನು ಹಣಿಯಲು ಹವಣಿಸಿದರು. ಯುದ್ಧ ಮಧ್ಯದಲ್ಲಿ ಈ ಕುಸಂಧಿ ಮುರಿದು ಹೋಗಿ ಪ್ರಜಾತಂತ್ರಗಳೂ ರಷಿಯವೂ ಅಚ್ಚಿನ ರಾಷ್ಟ್ರಗಳನ್ನು ಸದೆಬಡಿಯಲು ಹೊಸತೊಂದು ಕುಸಂಧಿಯನ್ನು ರಚಿಸಿಕೊಂಡವು. ಯುದ್ಧದಲ್ಲಿ ಅಚ್ಚಿನ ರಾಷ್ಟ್ರಗಳು ಉರುಳಿ ಬಿದ್ದಾಗ ಪ್ರಜಾತಂತ್ರಗಳಿಗೂ ರಷಿಯಕ್ಕೂ ತಮ್ಮ ದ್ವೇಷವನ್ನು ಪುನಃ ಸಾಧಿಸಲು ಅಘಾತಕೂಲವಾಯಿತು. ಈ ಮೂರೂ ಗುಂಪುಗಳು ಮಾನವ ಕುಲದ ಮೇಲೆ ಒಂದರ ಹಿಂದೊಂದು ಅನ್ಯಾಯಪನ್ನು ಮಾಡುತ್ತಾ ಬಂದಿವೆ; ಆದರೂ ಒಂದಕ್ಕೂ ಇನ್ನೂ ಪಶ್ಚಾತ್ತಾಪವಾಗಿಲ್ಲ. ಒಂದೊಂದೂ ತಂದೇ ಪಾಪವನ್ನು ಪುನಃ ಮಾಡಲು ಸಿದ್ಧವಾಗಿದೆ.

ಏಷಿಯಾದ ದೀರ್ಘ ನಿದ್ರೆ.

ಏಶಿಯದ ರಾಷ್ಟ್ರಗಳಿಗೆ-ಭಾರತವನ್ನೆಳಗೊಂಡು-ಈ ಚಿತ್ರದಲ್ಲಿ ಯಾವ ಸ್ಥಾನ? ನಾವು ಅತಿ ಜನದಟ್ಟಣೆಯಿಂದ, ಅತಿ ಬಡತನದಿಂದ ಅತಿ ನಿರಕ್ಷರತೆಯಿಂದ, ಅತಿ ಒಳಜಗಳಗಳಿಂದ ನಡೆಯುತಿದ್ದೇವೆ. ನಾವು ನಿದ್ದೆ ಮಾಡುವುದು ತೀರಾ ಹೆಚ್ಚಾಯಿತ. ನಮ್ಮ ನಿದ್ದೆಯ ಕಾಲದಲ್ಲಿ ನಮ್ಮನ್ನು ಸಿಕ್ಕಬಟ್ಟೆ ಅಳತೆ ವಿರಿಸೂರಿ ಮಾಡಲಾಯಿತು. ನಾವು ಇದೀಗ ಎದ್ದೇಳುತಿದ್ದೇವೆ. ಇನ್ನೂ ಪೂರ್ತಿ ಎಚ್ಚೆತ್ತಿಲ್ಲ. ನಮ್ಮನ್ನು ಯಾವುದು ರಕ್ಷಿಸುತ್ತದೋ ನಮಗೆ ಸರಿಯಾಗಿ ಗೊತ್ತಾಗದೆ ಗೊಂದಲದಲ್ಲಿ ಬಿದ್ದಿದ್ದೇವೆ. ಕೆಲವರು ಸಹಾಯಕ್ಕಾಗಿ ಪ್ರಜಾತಂತ್ರಗಳತ್ತ ಆಶಾದೃಷ್ಟಿಯನ್ನು ಬೀರಿದರೆ ಮತ್ತೆ ಕೆಲವರು ರಷಿಯದತ್ತ ಹೊರಳುತ್ತಾರೆ. ಕೆಲವರು ಎರಡೂ ಪಕ್ಷಗಳನ್ನು ನಂಬಲಾರದವರಾಗಿದ್ದಾರೆ. ಆದರೆ ಅವರಿಗೆ ತಮ್ಮ ಮನದ ನಿಜ ತನುಗೇ ಗೊತ್ತಿಲ್ಲ. ಮತ್ತು ಸ್ವತಂತ್ರ ಮಾರ್ಗವೂ ಕಾಣಿಸುವುದಿಲ್ಲ. ಭಾರತದಲ್ಲಿ, ಗಾಂಧೀಜಿ ಅವರಿಗೊಂದು ನಿಶ್ಚಿತ ಮಾರ್ಗವನ್ನು ತೋರಿಸಿದರು. ಆದರೆ ಅವರಿನ್ನೂ ಚಂಚಲಚಿತ್ತರಾಗಿಯೇ ಇದ್ದಾರೆ.

ಬಂಡವಾಳಶಾಹಿ ಹೋಗಬೇಕು.

ಗಾಂಧೀ ಮಾರ್ಗವನ್ನು ಒತ್ತಟ್ಟಿಗಿಟ್ಟರೂ ಒಂದು ಸಂಗತಿಯಂತೂ ಖಂಡಿತ. ಸದ್ಯದ ಬಂಡವಾಳಶಾಹಿ ಪದ್ಧತಿಯೂ ಜನತೆಯ ಸ್ಥಿತಿ ಮಟ್ಟವನ್ನ ಬೇಕುಬೇಕಾದಂತೆ ಏರಿಸುವ ಸ್ವತಂತ್ರ ಮತ್ತು ಸೌಕರ್ಯವೂ ತಾನೆ ಪ್ರಜಾತಂತ್ರವೆಂದಾದರೆ ಏಷಿಯಾದ ಜನರು ಅದನ್ನು ಬಹಳ ದಿನ ಸೈರಿಸಲಾರರು. ಬಂಡವಾಳಶಾಹಿ ಪದ್ಧತಿಯೂ ಪ್ರಗತಿಪರವೂ ಆದ ಕ್ರಮದಿಂದ ಆಳಿಯದಿದ್ದರೆ, ಬಲಿಷ್ಠ ಮತ್ತು ಫ್ಯಾಸಿಸ್ಟ್ ಮನೋವೃತ್ತಿಯ ರಾಷ್ಟ್ರವೂ ಏಷಿಯದಲ್ಲಿ ಕಮ್ಯೂನಿಜಂ ಪ್ರಸಾರವನ್ನು ತಡೆಯಲಾರದು. ಇಡೀ ಸೈಬೀರಿಯವೂ, ಇಡೀ ಚೀನವೂ, ಸಾಲದ್ದಕ್ಕೆ ಉತ್ತರ ಕೊರಿಯವೂ ಪೂರ್ತಿ ಕಮ್ಯೂನಿಸ್ಟರ ವಶವಾಗಿರುವಾಗ ಮತ್ತು ಭಾರತದಲ್ಲಿಯೂ ಆಗ್ನೇಯ ಏಷಿಯಾದಲ್ಲಿಯೂ ಕಮ್ಯೂನಿಸ್ಟ್ ಪ್ರಭಾವ ಅಸ್ತಿತ್ವದಲ್ಲಿರುವಾಗ ಮತ್ತು ಬಹುಶಃ ಹೆಚ್ಚಾಗತ್ತಿರುವಾಗ, ದಕ್ಷಿಣ ಕೊರಿಯನ್ನರು ತೋರಿಕೆಯ ಪ್ರಜಾತಂತ್ರದ ಕೆಳಗೆ ಜನಶೋಷಣೆಯ ಪದ್ಧತಿ ತಲೆ ಎತ್ತಿದರೆ ಹೇಗೆ ಸಹಿಸಬಲ್ಲರು? ಏಷಿಯದಲ್ಲಿ ಕಮ್ಯೂನಿಜಂ ಹರಡಲು ಕೇವಲ ರಷ್ಯಾದ ಕುತಂತ್ರವೇ ಕಾರಣವೆಂದಾಗಲೀ ದೊಡ್ಡ ದೊಡ್ಡ ಸಾಲಗಳನ್ನೂ ಯುದ್ಧ ಸಾಮಗ್ರಿಗಳನ್ನೂ ಒದಗಿಸಿದಾಕ್ಷಣ ಕಮ್ಯೂನಿಜವನ್ನು ತಡೆಯಬಹುದೆಂದಾಗಲಿ ಭಾವಿಸಿದರೆ ಪ್ರಜಾತಂತ್ರಗಳು ಬಲು ದೊಡ್ಡ ಭ್ರಾಮಕ ಕಲ್ಪನೆಯಲ್ಲಿವೆಯೆಂದು ಹೇಳಬೇಕು. ಅನುಕಂಪ ಹುಟ್ಟಿಸುವುದೇಕೆಂದರೆ, ಏಷಿಯ ದರಿದ್ರವಾಗಿದೆ, ಉಪವಾಸ ಬಿದ್ದಿದೆ. ಅಲ್ಲಿ ದಟ್ಟವಾದ ಜನಸಂಖ್ಯೆ ಇದೆ. ಮತ್ತು ಈ ದುರವಸ್ಥೆಯ ಪ್ರತೀತಿ ಅದಕ್ಕೆ ಉಂಟಾಗಿ

(ಒನೇ ಪುಠಕ್ಕೆ ಸಾಗಿದೆ)

ರಷ್ಯಾವು

ಧಾಳಿ ಮೂಡಿದರೆ.....?

ಸ್ವಿಕೀಯ ಮಹಾಯುದ್ಧದ ಕೊನೆಯಲ್ಲಿ ಸಂಯುಕ್ತ ರಾಷ್ಟ್ರಗಳು ಜಯಶಾಲಿಯಾದವು. ಜರ್ಮನಿಯ ವಿನಾಶವಾಯಿತು. ಇದರ ಫಲವಾಗಿ ಮಧ್ಯ ಯೂರೋಪವೂ ಪಶ್ಚಿಮ ಯೂರೋಪವೂ ಶಾಂತತೆಯಿಂದ ಕಾಲಹರಣ ಮಾಡಬಹುದೆಂದು ಶಾಂತತಾ ಪ್ರೇಮಿಗಳು ಅಪೇಕ್ಷಿಸಿದ್ದರು. ಆದರೆ ಮೊದಲನೆಯ ಮಹಾಯುದ್ಧದಲ್ಲಿ ಮಿತ್ರ ರಾಷ್ಟ್ರಗಳು ಜಯ ಪಡೆದು ನಂತರ ಒಪ್ಪಂದದ ಮೂಲಕ ಜರ್ಮನಿಯನ್ನು ಯೂರೋಪದ ತೊಡ್ಡನ್ನಾಗಿ ಮಾಡಿದಾಗಲೇ ದ್ವಿತೀಯ ಮಹಾಯುದ್ಧದ ಬೀಜಾರೋಪಣ ಮಾಡಿದಂತಾಯಿತೆಂದು ಅನೇಕ ಪಾಶ್ಚಾತ್ಯ ಮುತ್ಸದ್ದಿಗಳು ಆಗ ಎಚ್ಚರಿಕೆ ಕೊಟ್ಟಿದ್ದರು. ಆದರೆ ವಿಜಯೋನ್ಮಾದದಲ್ಲಿದ್ದ ರಾಷ್ಟ್ರಗಳಿಗೆ ಆವಾಗ ಎಚ್ಚರ ಬರಲಿಲ್ಲ.

ಕೇವಲ ೨೦ ವರ್ಷಗಳಲ್ಲಿ ಅಂದಿನ ಭವಿಷ್ಯವು ನಿಜವಾಗಿ ದ್ವಿತೀಯ ಮಹಾಯುದ್ಧವು ಮತ್ತೊಮ್ಮೆ ಇಡೀ ಪ್ರಪಂಚವನ್ನು ಆವರಿಸಿತು. ಅದರಲ್ಲಿ ಮತ್ತೆ ಮಿತ್ರರಾಷ್ಟ್ರಗಳು ಯಶಸ್ವಿಯಾದವು. ಆದರೆ ಎರಡನೇ ಮಹಾಯುದ್ಧವು ಮುಗಿದು ಇನ್ನೂ ೫ ವರ್ಷಗಳಾಗುವಷ್ಟರಲ್ಲಿ ಮತ್ತೆ ಅದೇ ಪಾಶ್ಚಾತ್ಯ ರಾಷ್ಟ್ರಗಳ ರಾಜಕೀಯ ಚದುರಂಗದಾಟದ ಮೂಲಕ ಇನ್ನೊಂದು ಮಹಾ ಯುದ್ಧವು ತಲೆಯೆತ್ತುವ ಮಹಾಗೆ ಕಾಣುತ್ತಿದೆ. ಮೊದಲಿನ ಎರಡು ಮಹಾ ಯುದ್ಧಗಳಲ್ಲಿ ಇಂಗ್ಲೆಂಡ್–ಜರ್ಮನಿಗಳ ಮುಖ್ಯ ಭೂಮಿಕೆ ಇನ್ನಷ್ಟಿ ಈಗಿನ ಕಾಂಡದಲ್ಲಿ ಅಮೇರಿಕೆ–ಶಸ್ತ್ರಾಗಳ ಪ್ರಮುಖ ಪಾತ್ರವು ಎನ್ನುವ ಕಾಣುತ್ತಿದೆ

ಈ ಯುದ್ಧಗಳಿಗೆ ಕಾರಣವು ಏನೇ ಇದ್ದರೂ ಅದರ ಹೊಣೆಗಾರಿಕೆ ಮಾತ್ರ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳ ಮೇಲೆಯೂ ಇದೆ. ಅಂತೆಯೇ ಅವು ಒಂದು ಮಹಾಯುದ್ಧವು ಮುಗಿದ ಕೂಡಲೆ ಇನ್ನೊಂದು ಮಹಾಯುದ್ಧಪೂರ್ವ ಸಿದ್ಧತೆಯನ್ನೋ ಅಥವಾ ಸಂರಕ್ಷಣೆಯ ಸಿದ್ಧತೆಯನ್ನೋ ಮಾಡಿಕೊಳ್ಳುವದರಲ್ಲಿಯೇ ತಲ್ಲೀನವಾಗುತ್ತಿವೆ. ಮತ್ತು ಯುದ್ಧ ಭೀತಿಯಿಂದ ಗ್ರಸ್ತವಾದ ದೊಡ್ಡ ರಾಷ್ಟ್ರವು ಇತರ ಎಲ್ಲ ರಾಷ್ಟ್ರಗಳನ್ನು ಸಂಶಯಿತ ದೃಷ್ಟಿಯಿಂದಲೇ ನೋಡುತ್ತ ಆ ರಾಷ್ಟ್ರಗಳ ಕೃತಿಗಳು ಏನೇ ಇದ್ದರೂ ಅವು ತನ್ನನ್ನು ಹತ್ತಿಕ್ಕಲಿಕ್ಕಾಗಿಯೇ ಇರುವವೆಂದು ಬಗೆದು ಆದಷ್ಟು ಸ್ವತಂತ್ರವಾಗಿ ತಾನೂ ಏನಾದರೂ ಮಾಡಬೇಕೆಂದು ಕೆಲವೊಂದು ಉಪಾಯಗಳನ್ನು ಯೋಚಿಸುತ್ತಿದೆ.' ಇಷ್ಟೊಂದು ರಾಷ್ಟ್ರವು, ಈ ರಾಷ್ಟ್ರವು ಕೈಕೊಂಡ ಯೋಜನೆಯನ್ನೂ ಸಂಶಯ ದೃಷ್ಟಿಯಿಂದಲೇ ನೋಡುತ್ತಾ, ಹೋಗುವದರಿಂದ ಮೊದ ಮೊದಲು ಉಂಟಾದ ತಪ್ಪು ತಿಳುವಳಿಕೆಯು ಬೆಳೆಯುತ್ತ ಸಾಗಿ ಕೊನೆಗೆ ಅದು ವೈರಭಾವನೆಗೆ ಕಳೆಯುತ್ತಿದೆ. ಇಂದು ರಷ್ಯಾದ ವಿಷಯಕ್ಕೆ ಪಶ್ಚಿಮ ಯೂರೋಪದ ರಾಷ್ಟ್ರಗಳು ತಾಳಿದ ಭೀತಿಯ ಹಿನ್ನೆಲೆಯೇ ಇದಾಗಿದೆ.

ರಷ್ಯಾವು ಯಾವ ಕಾಲಕ್ಕೆ ತನ್ನ ಮೇಲೆ ಏನಾ ಬಹುದೆಂಬ ಭೀತಿ ಸೃಷ್ಟಿಸಿದ ರಾಷ್ಟ್ರಗಳಲ್ಲಿ ಬಲವಾಗಿ ಬೇರೂರಿದೆ. ಅಂಥ ಪ್ರಸಂಗವೇ ಒದಗಿ ಬಂದಲ್ಲಿ ತಾವು ಏನು ಮಾಡಬೇಕು? ತನ್ನ ಸಂರಕ್ಷಣೆಯ ಬಗೆ ಹೇಗೆ? ಸೈನಿಕ ಶಕ್ತಿಯ ದೃಷ್ಟಿಯಿಂದ ನೋಡಿದರೆ ಇವರೆಲ್ಲರೂ ಕೂಡಿ, ರಷ್ಯಾವು ಬ್ಯಾಸೆಲ್ಸ್ ಒಪ್ಪಂದಕ್ಕೆ ಅಂಕಿತ ಹಾಕಿದ ಇಂಗ್ಲೆಂಡ್, ಫ್ರಾನ್ಸ್ ಮತ್ತು ಇತರ ರಾಷ್ಟ್ರಗಳು ೫ ಲಕ್ಷ ಸೈನಿಕ ಬಲವನ್ನು ಸಿದ್ಧಗೊಳಿಸಬೇಕೆಂದು ನಿರ್ಧರಿಸಿದ್ದರೂ ಆ ಸೈನಿಕ ಬಲವನ್ನು ೨ ಲಕ್ಷಕ್ಕಿಂತ ಹೆಚ್ಚಾಗಿ ಬೆಳೆಸಲು ಸಾಧ್ಯವಾಗಿಲ್ಲ. ಮೇಲಾಗಿ ಹಣದ ಕೊರತೆಯಂತೂ ಇದ್ದೇ ಇದೆ.

ಈ ಪರಿಸ್ಥಿತಿಯಲ್ಲಿ ರಷ್ಯಾವು ಏಗಾ ಬಂದಾದೇ ಆದರೆ ಅದನ್ನು ಎದುರಿಸುವ ಬಗೆ ಹೇಗೆ? ಆವಾಗ ಪಶ್ಚಿಮ ಯೂರೋಪದ ರಾಷ್ಟ್ರಗಳ ಗತಿಯೇನು? ಇವೇ ಮೊದಲಾದ ಪ್ರಶ್ನೆಗಳ ಬಗ್ಗೆ ವಿಚಾರ ಮಾಡಿ ವರದಿಯನ್ನೊಪ್ಪಿಸುವದಕ್ಕಾಗಿ ಫ್ರಾನ್ಸ್ ಮತ್ತು ಇಂಗ್ಲೆಂಡ ಗಳ ರಾಜಕಾರಣಿಗಳ ಒಂದು ಸರಕಾರೇತರ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯಲ್ಲಿ ಫ್ರಾನ್ಸಿನ ಪರವಿಯಿಂದ, ದ್ವಿತೀಯ ಮಹಾ ಯುದ್ಧದಲ್ಲಿ ಫ್ರಾನ್ಸಿನ ಪತನದ ಕಾಲದಲ್ಲಿ ಸಂಖ್ಯ ಮಂತ್ರಿಯಾಗಿದ್ದ ಪಾಲ್ ರೀನೌ, ಈಗ ಸರರಾಷ್ಟ್ರ ಮಂತ್ರಿಯಾಗಿರುವ ಮೂರಿಸ್ ಶಾನನ್ ಮೊದಲಾದವರಿರುವರು. ಮತ್ತು ಇಂಗ್ಲೆಂಡಿನ ಪರವಿಯಿಂದ ಮೈನೂರಿಕ ತಜ್ಞರಾದ ಲಾರ್ಡ್ ಬ್ಯಾಬೆಷೋನ್, ಲಾರ್ಡ್ ವ್ಹಾನ್ಸಿಟಾರ್ಟ್ ಮೊದಲಾದವರಿರುವರು. ಧಾಳಿ ಹೂಡಿದರೆ ಆ ಧಾಳಿಯನ್ನು ಹೇಗೆ ಎದುರಿಸಬೇಕೆಂಬುದನ್ನೂ ಮತ್ತು ಧಾಳಿಯು ಆರಂಭವೇ ಆದಲ್ಲಿ ತಾವು ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನೂ ಸೂಚಿಸುವ ಒಂದು ವರದಿಯನ್ನು ಪಶ್ಚಿಮ ಯುರೋಪಿಯನ್ ರಾಷ್ಟ್ರಗಳ ಸಮಿತಿಯ ಪರವಾಗಿ ಅದರ ಡೈರೆಕ್ಟರ್ ಜನರಲ್ಲರಾದ ಮಿ. ರಾಬರ್ಟ್ ಬೋರೇಖ್ ರವರ ಅಂಕಿತದಲ್ಲಿ ಪ್ರಕಟಿಸಿದ್ದಾರೆ. ಆ ವರದಿಯ ಮುಖ್ಯ ಅಂಶಗಳು ಹೀಗಿವೆ :—

"ರಷ್ಯಾವು ಒಮ್ಮಿಂದೊಮ್ಮೆ ಪಶ್ಚಿಮ ಯೂರೋಪದ ಮೇಲೆ ಅಕಸ್ಮಿಕವಾಗಿ ವಿಂಚಿನ ವೇಗದ ಧಾಳಿಯನ್ನಾರಂಭಿಸಿದರೆ ಸೈನಿಕ ಶಕ್ತಿಯಿಂದ ಅದನ್ನೆದುರಿಸುವುದು ಅಸಾಧ್ಯ. ಯಾಕಂದರೆ ರಷ್ಯಾದ ೨೫ ಲಕ್ಷ ಸುಸಜ್ಜಿತ ಸೈನ್ಯದೆದುರು ತನ್ನ ೨ ಲಕ್ಷ ಸೈನ್ಯವು ಯಾವ ಗಿಡದ ತೊಪ್ಪಲು? ಆದ್ದರಿಂದ ರಷ್ಯಾವು ಧಾಳಿಯನ್ನಾರಂಭಿಸಿದ ನಂತರ ಮೊದ ಮೊದಲು ತಮಗೆ ಅತೀವ ಹಾನಿಯಾದರೂ "ಯುದ್ಧವನ್ನು ಯುದ್ಧವೇ ಕೊಲ್ಲುವುದು" ಎಂಬ ಫ್ರೆಂಚ್ ಕ್ರಿಮಿ ಶಾಸ್ತ್ರಜ್ಞ ಲುಯಿ ಪಾಶ್ಚ್ಯರನ ತತ್ವದಂತೆ ನಡೆಯಬೇಕಾಗುವುದು. (ಲುಯಿ ಪಾಶ್ಚ್ಯರನು ಮುಂದಾಗಬಹುದಾದ ಯುದ್ಧಗಳ ಮತ್ತು ಆ ಯುದ್ಧಗಳಲ್ಲಿ ಉಪಯೋಗಿಸಲಾಗುವ ಶಸ್ತ್ರಾಸ್ತ್ರಗಳ ವಿಷಯವಾಗಿ ಹೇಳಿದ್ದ ಮುಂದಾಗುವ ಯುದ್ಧಗಳಲ್ಲಿ ಜಯಶಾಲಿ ಪಕ್ಷ ಮತ್ತು ಸೋತ ಪಕ್ಷ ಹೀಗೆ ಉಳಿಯುವುದೇ ಇಲ್ಲ. ಯಾಕಂದರೆ ಮುಂದಿನ ಯುದ್ಧಗಳಲ್ಲಿ ಅತ್ಯಂತ ಘಾತುಕವಾದ ಕ್ರಿಮಿ ಯುದ್ಧಗಳಾಗುವದರಿಂದ ಯುದ್ಧಾರಂಭಕ್ಕ ಪಕ್ಷಗಳೆಲ್ಲವೂ ನಿರ್ನಾಮವಾಗಿ ಹೋಗುವುದರಿಂದ ಗೆಲುವನ್ನಾಗಲೀ ಸೋಲನ್ನಾಗಲೀ ಪಡೆಯುವ ಪಕ್ಷಗಳೇ ಉಳಿಯುವುದಿಲ್ಲ. ಆದುದರಿಂದ ಇಂಥಾ ಪ್ರಳಯಕಾರಕ ಶಸ್ತ್ರಗಳಿಗಿಂಜಿ ಮುಂದೆ ಪ್ರಪಂಚದಲ್ಲಿ ಯುದ್ಧವೂ ಆಗುವುದಿಲ್ಲ ಎಂದು ಪ್ರತಿಪಾದಿಸಿದ್ದಾನೆ)

ಒಮ್ಮಿಂದೊಮ್ಮೆ ಯುದ್ಧವೇ ಆದರೆ, ಅಂಥ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿ "ಅಣುಬಾಂಬು"ಗಳನ್ನು ಬಹಿಷ್ಕರಿಸಬೇಕೆಂಬ ಸೂಚನೆಗಳನ್ನು ಮುನ್ನಿಸಕೂಡದು. ಮತ್ತು ಪ್ರತಿಯೊಂದು ರಾಷ್ಟ್ರದ ವಶದಲ್ಲಿ ಸಾವಿರಾರು ಅಣುಬಾಂಬು, ನೂರಾರು ಹೈಡ್ರೋಜನ್ ಬಾಂಬು, ಅನೇಕ ವಿಧದ ಕ್ರಿಮಿ ಯುದ್ಧಾಸ್ತ್ರಗಳು ಇದ್ದರೆ ರಷ್ಯಾವು ಪಶ್ಚಿಮ ಯೂರೋಪದ ಮೇಲೆ ದಾಳಿ ಮಾಡಿದ್ದೇ ತಡ, ಮುಂದೆ ಕೆಲವೇ ಗಂಟೆಗಳಲ್ಲಿ ರಷ್ಯಾದ ಮಾಸ್ಕೋ, ಪೆಟ್ರೋಗ್ರಾಡ್, ಕೀವ್ಫ್, ಓಡೆಸ್ಸಾ, ಸ್ಟೆಪರ ಅಣೆಕಟ್ಟು ಮತ್ತು ಸ್ಟಲಿನ್‌ಗ್ರಾಡ್, ಮ್ಯಾಗ್ನಿಟೋಗೋರ್ಸ್ಕ್ ಮೊದಲಾದ ಪ್ರಮುಖ ಔದ್ಯೋಗಿಕ ಕೇಂದ್ರಗಳು ಹೇಳ ಹೆಸರಿಲ್ಲದಂತಾಗುವವು. ಮತ್ತು ಯುಕ್ರೇನ್ ಸೈಬೀರಿಯಗಳ ಸತ್ತು ಮಂತ್ರಲಿನ ಸಾವಿರಾರು ಮೈಲು ಪ್ರದೇಶದಲ್ಲಿಯು ಫಲವತ್ತಾದ ಭೂಮಿ ಮತ್ತ ಬೆಳೆಯು ಸುಟ್ಟು ಭಸ್ಮವಾಗಿರುವುದು.

ಈ ಉಪಾಯವು ಆಕ್ರಮಣಕಾರಕ ವಿರದೆ ಆಕ್ರಮಣದ ಪ್ರತೀಕಾರವಿದೆ. ಮತ್ತು ಆಕ್ರಮಣದ ಪ್ರತೀಕಾರವು ಸಹಿತ ಯುದ್ಧ ನೀತಿಗನುಸರಿಸಿ ಸಂರಕ್ಷಣೆಯ ಯೋಜನೆಯು ಒಂದು ಅಂಗವಾಗಿದೆ. ಆದಕ್ಕಾಗಿ ಪಶ್ಚಿಮ ಯೂರೋಪಿಯನ್ ರಾಷ್ಟ್ರಗಳು ಈಗ ಅನುಸರಿಸುತ್ತ ಬಂದ ನಿಷ್ಕ್ರಿಯ ಧೋರಣೆಯನ್ನು ಬಿಟ್ಟುಕೊಟ್ಟು ಅವೆಲ್ಲ ಒಂದಾಗೂಡಬೇಕು. ಪತ್ತು ಅವುಗಳ ಪದಾತಿ ದಳದ ಸಹಾಯಕ್ಕೆಂದು ಪ್ರಥಮ ಶ್ರೇಣಿಯ ೪೫,೦೦೦ ಬಾಂಬರ ವಿಮಾನಗಳನ್ನು ಬೇರೆ ಬೇರೆ ೪೦–೫೦ ವಿಮಾನ ನಿಲ್ದಾಣಗಳಲ್ಲಿ ಪೂರ್ಣ ಸಿದ್ಧತೆಯಲ್ಲಿಡಬೇಕ. ಮತ್ತು ಅವು ಅಣುಬಾಂಬುಗಳನ್ನು ಹೇರಿಕೊಂಡು ಸಿದ್ಧವಾಗಿರಬೇಕು.

ಇದು ಯುದ್ಧದ ಪ್ರತ್ಯಕ್ಷ ಸಿದ್ಧತೆಯಾಯಿತು. ಇಷ್ಟಕ್ಕೇ ಈ ಕಾರ್ಯವು ಮುಗಿಯಲಿಲ್ಲ ಪಶ್ಚಿಮ ಯೂರೋಪದ ಬಹುತರ ಎಲ್ಲ ರಾಷ್ಟ್ರಗಳಲ್ಲಿ ಲಕ್ಷಾಧಿಜನ ಕಮ್ಯುನಿಸ್ಟ ಪಂಚಮ ದಳದವರು ಹುದುಗಿಕೊಂಡಿದ್ದಾರೆ. ಆತ ರಷ್ಯಾದ ಧಾಳಿಯು ಪ್ರಾರಂಭವಾಗುತ್ತಲೇ ಇತ್ತ ಈ ಪಂಚಮ ದಳಗಳ ಚಟುವಟಿಕೆಗಳೂ ರಭಸದಿಂದ ಶುರುವಾಗುವದರಲ್ಲಿ ಸಂದೇಹವಿಲ್ಲ ಇವರ ಚಟುವಟಿಕೆಗಳನ್ನು ಸದೆ ಬಡಿಯಲಿಕ್ಕಾ ಮತ್ತು ವೈರಿಯು ಆಕ್ರಮಿಸಿದ ಪ್ರದೇಶದಲ್ಲಿ ವೈರಿಯು ಆಡಳಿತವು ಸುಸೂತ್ರವಾಗಿ ಸಾಗದಂತೆ ನೋಡಿಕೊಳ್ಳುವುದಕ್ಕಾ ಪ್ರತಿಯೊಂದು ರಾಷ್ಟ್ರದಲ್ಲಿ ಕೂಟ ಯೋದ್ಧರ ಪಡೆಗಳ ನಿರ್ಮಾಣವಾಗಬೇಕು. ವೈರಿ ಹಸ್ತಗತವಾದ ಪ್ರದೇಶದಲ್ಲಿ ಒಳಗಿನಿಂದ ಕೂಟ ಯೋದ್ಧರೂ ಎದುರಿನಿಂದ ನಮ್ಮ ಸೈನಿಕರೂ ಪ್ರತಿಧಾಳಿಯನ್ನಾರಂಭಿಸಿದರೆ ವೈರಿ ಚಲನವಲನವು ಸ್ಥಗಿತವಾಗುವದರಲ್ಲಿ ಸಂದೇಹವಿಲ್ಲ".

ಮೇಲಿನ ವರದಿಯನ್ನು ನೋಡಿದರೆ ಯುದ್ಧದಲ್ಲಿ ಜಯಶಾಲಿಗಳಾಗಿದ್ದರೂ ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ಪಶ್ಚಿಮ ಯೂರೋಪದ ರಾಷ್ಟ್ರಗಳು ಇಂದು ಎಂತಹ ಭೀತಿಯ ವಾತಾವರಣದಲ್ಲಿ ಕಾಲ ಕಳೆಯುತ್ತಿವೆಯೆಂಬುದು ಗೊತ್ತಾಗದಿರದು. "ಜೈಹಿಂದ್"

ತೂತು-ಬಾವಿ ಯೋಜನೆಗೆ ನಾಲ್ಕುಕೋಟಿ ರೂಪಾಯಿ.

ಮದ್ರಾಸು ಮತ್ತು ಒರಿಸ್ಸಾ ಪ್ರಾಂತ್ಯಗಳಲ್ಲಿ ಸಮುದ್ರ ಕರಾವಳಿಯಲ್ಲಿರುವ ವಿಸ್ತಾರ ಕ್ಷೇತ್ರಗಳನ್ನು ಕೃಷಿಗೆ ಅನುಕೂಲಗೊಳಿಸುವ ಬಗ್ಗೆ ನಾಲ್ಕುಕೋಟಿ ರೂಪಾಯಿಯ ಆಂತರ್–ಸಂಸ್ಥಾನ ತೂತು ಬಾವಿ ಯೋಜನೆಯೊಂದನ್ನು ಮದ್ರಾಸು ಸರಕಾರದ ಪರ್ಯಾಲೋಚನೆಗಾಗಿ ಭಾರತದ ಆಹಾರ ಮಂತ್ರಿ ಶ್ರೀ. ಕೆ. ಎಂ. ಮುನ್ಶಿಯವರು ಸೂಚಿಸಿರುವರು. ಮದ್ರಾಸು ಸೆಕ್ರೆಟೇರಿಯಟ್‌ದಲ್ಲಿ ನಡೆದ ಆಹಾರ ಕುರಿತಾದ ಮಂತ್ರಿಗಳ ಒಂದು ಪ್ರಮುಖ ಸಮ್ಮೇಳನದಲ್ಲಿ ಶ್ರೀ. ಮುನ್ಶಿಯವರು ಈ ಯೋಜನೆಯ ವಿಚಾರ ಎತ್ತಿದುದಾಗಿದೆ. ಒರಿಸ್ಸಾ ಮತ್ತು ಮದ್ರಾಸು ಸಂಸ್ಥಾನಗಳಲ್ಲಿ ಅಪಾರ ಸಂಖ್ಯೆಯಲ್ಲಿ ತೂತು-ಬಾವಿಗಳನ್ನು ಕೊರೆದು ಆ ಮೂಲಕ ಕೃಷಿಗೆ ಅವಶ್ಯವಿರುವ ನೀರನ್ನು ಒದಗಿಸಿಕೊಡುವುದು ಯೋಜನೆಯ ಮುಖ್ಯ ತತ್ವವಾಗಿದೆ. ಪ್ರತಿಯೊಂದು ತೂತು ಬಾವಿಗೆ ಸುಮಾರು ೪೦,೦೦೦ ರೂಪಾಯಿ ಖರ್ಚು ತಗಲಬಹುದು. ಅಂತಹ ಬಾವಿಗಳಿಂದ ಕೃಷಿಗೆ ವಿಪುಲ ನೀರಿನ ಸರಬರಾಯಿ ಸಿಗುವುದರಲ್ಲಿ ಅಡ್ಡಿಯಿಲ್ಲ. ಆಹಾರದ ಕುರಿತು ಸ್ವಾವಲಂಬಿಯಾಗುವ ಮದ್ರಾಸಿನ ಯತ್ನಗಳಿಗೆ ಈ ಯೋಜನೆ ತುಂಬಾ ಸಹಕಾರಿಯಾಗದಿರದು. ಸುಮಾರು ೪|| ಕೋಟಿ ರೂಪಾಯಿ ವೆಚ್ಚದ ಅಂತಹದೇ ಒಂದು ಯೋಜನೆ ಸಂಯುಕ್ತ ಪ್ರಾಂತ–ಸಂಜಾತಬಗಳ ಬಗ್ಗೆ ಯೋಚಿಸಲಾಗಿದೆಯೆಂದೂ ಆಹಾರ ಮಂತ್ರಿಗಳು ಸೂಚಿಸಿದರು. ಮದ್ರಾಸು–ಒರಿಸ್ಸಾ ಯೋಜನೆಗೆ ಬೇಕಾದ ೪ ಕೋಟಿ ರೂಪಾಯಿಯನ್ನು ಅವಶ್ಯವಿದ್ದರೆ ಕೇಂದ್ರ ಸರಕಾರದ ಕಡೆಯಿಂದ ಸಾಲದ ರೂಪದಲ್ಲಿ ಕೊಡಿಸಬಹುದೆಂದೂ ಶ್ರೀ. ಮುನ್ಶಿಯವರು ಮದ್ರಾಸು ಸರಕಾರಕ್ಕೆ ಸೂಚಿಸಿರುವರು. ನೀರಿನ ಸರಬರಾಯಿ ಎಲ್ಲಿ ವಿಪುಲವಾಗಿ ದೊರೆವುದೆಂಬುದನ್ನು ಸುಲಭವಾಗಿ ಕಂಡು ಹಿಡಿಯಬಲ್ಲ ಯೋಗಿಯೊಬ್ಬನು ರಾಜಸ್ಥಾನದಲ್ಲಿರುವನೆಂದೂ ಅವನ ಸಹಾಯವನ್ನು ಈ ವಿಚಾರದಲ್ಲಿ ಪಡೆಯಬಹುದೆಂದೂ ಆಹಾರ ಮಂತ್ರಿಗಳು ತಿಳಿಸಿದ್ದಾರೆ. ಯಾವುದೇ ಒಂದು ಯತ್ರ ಇಲ್ಲವೆ ಸಲಕರಣದ ಸಹಾಯವಿಲ್ಲದೆ ರಾಜಸ್ಥಾನದ ಯೋಗಿಯು ನೀರು ಎಲ್ಲಿ ಸಮೃದ್ಧಿ ಸಿಗಬಹುದೆಂಬುದನ್ನು ಕಂಡುಹಿಡಿಯಬಲ್ಲನಂತೆ!

ಕೊ ಡ ಗು

ತಾ. ೨೧-೭-೧೯೫೦ನೇ ಶುಕ್ರವಾರ

ಶಾಂತಿ ಸಂಧಾನ.

ಕೊರಿಯೂ ಯುದ್ಧವು ಜಗತ್ತಿನ ಯುದ್ಧವಾಗುವ ಸಂಭವ ನೂರಕ್ಕೆ ೫೦ ರಷ್ಟಿದೆಯೆಂಬ ಪಂಡಿತ ಜವಾಹರರ ಮಾತನ್ನು ಪ್ರತಿಯೊಬ್ಬನೂ ಲಕ್ಷಿಸಬೇಕಿದೆ. ಇದರಿಂದ ಜಗತ್ತು ಮೂರನೇ ಮಹಾಯುದ್ಧವೆಂಬ ಮಹಾಜ್ವಾಲಾಮುಖಿಯ ಮೇಲೆ ಕೂತಿದೆ ಎಂದಂತಾಯಿತು. ಯಾವಾಗ ಈ ಜ್ವಾಲಾಮುಖಿಯ ಸ್ಫೋಟನವಾಗುವದೋ ಹೇಳಲು ಸಾಧ್ಯವಿಲ್ಲದಿದ್ದರೂ ಕೊರಿಯೂದಲ್ಲಿ ಎದ್ದಿರುವ ಕಿರುಜ್ವಾಲೆಯು ಜಗತ್ತನ್ನು ವಿನಾಶದ ಕಡೆಗೆಳೆಯಬಹುದು. ಜಗತ್ತಿನ ಮೂರನೆ ಯುದ್ಧದ ಭಯ ಎಲ್ಲಾ ರಾಷ್ಟ್ರಗಳಲ್ಲೂ ಇದೆ. ರಷ್ಯಾವು ಪಶ್ಚಿಮದಲ್ಲಿ ಎಲ್ಲಿ ಥಾಳಿ ಮೂಡೀತೋ ಎಂದು ಯೂರೋಪಿನ ಹಲವು ರಾಷ್ಟ್ರಗಳು ಸಿದ್ಧತೆಯನ್ನು ಮಾಡುತ್ತಿವೆ. ರಷ್ಯಾದ ವರ್ಚಸ್ಸು ವಿಸ್ತಾರಗೊಳ್ಳದಂತೆ ತಡೆಟ್ಟಲು ಅಮೇರಿಕಾವು ತನ್ನ ಕಾರ್ಯಕ್ಷೇತ್ರವನ್ನು ವಿೂರಿ ಪ್ರಯತ್ನಿಸುತ್ತಿದೆ. ಪ್ರತಿಯೊಂದು ರಾಷ್ಟ್ರವೂ ಜಗತ್ತಿನ ಶಾಂತಿ ಉಳಿಯಬೇಕೆಂದು ಕೂಗಿದರೂ ಒಳಗೊಳಗೇ ಯುದ್ಧ ತಯಾರಿಯನ್ನು ಮಾಡಿಕೊಳ್ಳುತ್ತಿವೆ. ಈ ಹಿನ್ನೆಲೆಯಿಂದ ನೋಡುವದಾದರೆ ಕೊರಿಯೂ ಯುದ್ಧದಲ್ಲಿ ಮಧ್ಯಸ್ಥಿಕೆ ವಹಿಸಿ ಶಾಂತಿ ಪ್ರಯತ್ನಮಾಡಲು ಯತ್ನಿಸುತ್ತಿರುವ ನೆಹರೂರವರ ಪ್ರಯತ್ನವು ಈಗ ಕಟ್ಟಿಗೆಗೆ ಬಂದಿರುವ ಗಂಡಾಂತರವನ್ನು ಪರಿಹರಿಸುವ ಮಾರ್ಗ ಮಾತ್ರ ಆಗಿದೆ. ಕೊರಿಯೂ ಯುದ್ಧವು ಕೊರಿಯೂದೊಳಗೇ ಸ್ಥಳೀಕರಿಸಲ್ಪಟ್ಟು ಅಲ್ಲಿಯ ಸಮಸ್ಯೆಗಳು ಪ್ರಪಂಚದ ರಂಗಸ್ಥಳಕ್ಕೆ ಹಬ್ಬದಂತೆ ಮಾಡುವದೇ ಈ ಪ್ರಯತ್ನದ ಗುರಿಯಾಗಿದೆ. ನೆಹರೂರವರ ಈ ಪ್ರಯತ್ನವನ್ನು ಸ್ಟಾಲಿನರು ಸ್ವಾಗತಿಸಿದ್ದಾರೆ. ಸ್ಟಾಲಿನರೇ ಏಕೇ? ಜಗತ್ತಿನ ಶಾಂತಿಯು ಆಶೆ ಇರುವ ಪ್ರತಿಯೊಬ್ಬನೂ ಇದನ್ನು ಸ್ವಾಗತಿಸಲೇಬೇಕು. ಅಮೇರಿಕಾ ಬ್ರಿಟನುಗಳಂದ ಇನ್ನೂ ನೆಹರೂರವರ ಪತ್ರದ ಬಗ್ಗೆ ಉತ್ತರ ಬಂದಿರುವದಿಲ್ಲ ಅವುಗಳು ಬಂದ ನಂತರ ನೆಹರೂರವರು ಮುಂದಿನ ಹೆಜ್ಜೆ ಇಡುವರು. ಹೇಗೂ ನೆಹರೂವರ ಈ ಸಂಧಾನ ಪ್ರಯತ್ನವು ಯಶಸ್ವಿಯಾಗಿ ಕೊರಿಯೂ ಯುದ್ಧವು ಕೊರಿಯೂದಲ್ಲೇ ಪರ್ಯವಸಾನವಾಗುವಂತಾಗಲಿ.

ಇಷ್ಟಾದ ಮಾತ್ರಕ್ಕೆ ಜಗತ್ತಿನ ಶಾಂತಿ ಸ್ಥಾಪಿಸಲ್ಪಟ್ಟಂತಲ್ಲ. ಯೂರೋಪಿನ ರಾಷ್ಟ್ರಗಳ ಮನೋವೃತ್ತಿ ವಿಚಿತ್ರ ಪಥದಿಂದ ಸಾಗುತ್ತಿದೆ. ಪ್ರತಿ ರಾಷ್ಟ್ರಗಳೂ ಹರ ಮಾಣು ಬಾಂಬು, ವಿಷಕ್ರಿಮಿ ಬಾಂಬುಗಳನ್ನು ಇಟ್ಟುಕೊಂಡು ಜಗತ್ತಿನಲ್ಲಿ ಯುದ್ಧವು ಅಸಾಧ್ಯವಾಗುವಂತೆ ಮಾಡಬೇಕೆಂದು ಯತ್ನಿಸುತ್ತಿವೆ! ಆದರೆ ಇದು ಶಾಂತಿಯ ಮಾರ್ಗವಲ್ಲ. ಶಾಂತಿಯ ಮಾರ್ಗವು ಹೃದಯಪರಿವರ್ತನೆಯೆ ಮಾರ್ಗವಲ್ಲದೆ ತೋಲ್ಬಲದ ಪಥವಲ್ಲ. ನೆಹರೂರವರ ಪ್ರಯತ್ನದಿಂದ ಸಂಯುಕ್ತ ರಾಷ್ಟ್ರ ಸಭೆಯ ಆಶ್ರಯದಲ್ಲಿ ಜಗತ್ತಿನ ರಾಷ್ಟ್ರಗಳೆಲ್ಲವೂ ಸೇರಿ ಜಗತ್ತಿನ ಶಾಂತಿ ಸಾಧನೆಗಾಗಿ ಪ್ರಯತ್ನಿಸುವ ಅನುವಾಗಲಿ.

ವರ್ತಮಾನ.

ಕೊಡಗು ಸರಕಾರಿ ಕಾಲೇಜು ಯೂನಿಯನ್ನಿನ ಜನರಲ್ ಸೆಕ್ರೆಟರಿಯಾಗಿ ಶ್ರೀ ಎಂ. ಎಂ. ಪೂಣಚ್ಚನವರೂ, ಸಹಾಯಕ ಕಾರ್ಯದರ್ಶಿಯಾಗಿ ಶ್ರೀ ಎಂ. ಡಿ. ಜಡೂ ಇವರೂ, ವಿಜ್ಞಾನ ಶಾಖೆಗೆ ಶ್ರೀ ಪುಲಿಯಂಡ ಎಂ. ಗಣಪತಿಯವರೂ, ಚರಿತ್ರೆ ಶಾಖೆಗೆ ಶ್ರೀ ಪಿ. ಎಂ. ನಾಣಯ್ಯನವರೂ, ಕನ್ನಡ ಶಾಖೆಗೆ ಶ್ರೀ ಶಿವರಾಮು ರೈಯವರೂ, ಹಿಂದೀ ಶಾಖೆಗೆ ಶ್ರೀ ನಾರಾಯಣರವರೂ, ಚರ್ಚಾಕೂಟಕ್ಕೆ ಶ್ರೀ ಬಿ. ಕೆ. ಬೋಜನ್ನನವರೂ ಆರಿಸಲ್ಪಟ್ಟಿರುವರು.

ಮಡಿಕೇರಿಗೆ ತಾ. ೧೪ರಿಂದ ಇಂದಿನ ವರೆಗೆ ೩ ಇಂಚು ೫೯ ಸೆಂಟು ಮಳೆಯಾಗಿದೆ. ಈ ವರೆಗೆ ಒಟ್ಟು ೪೭ ಇಂಚು ೮೨ ಸೆಂಟು ಮಳೆಯಾದಂತಾಯಿತು.

ಕೊಡವ ವಿದ್ಯಾನಿಧಿಯ ಸಾಲ ಮರುಪಾವತಿ ಮತ್ತು ಚಂದಾ ವಸೂಲಾತಿಯು ತೃಪ್ತಿಕರವಾಗಿಲ್ಲದ ಕಾರಣ ವಿದ್ಯಾರ್ಥಿಗಳಿಗೆ ಸಾಲ ಕೊಡುವುದನ್ನು ನಿಲ್ಲಿಸಿ, ಡಿಪಾಜಿಟ್ ಹಣದ ಬಡ್ಡಿಯಿಂದ ಕೆಲವು ಯೋಗ್ಯ ವಿದ್ಯಾರ್ಥಿಗಳಿಗೆ ಮಾತ್ರ ವೇತನ ಕೊಡುವ ವಿಷಯ ಚರ್ಚಿಸಲು ಈ ನಿಧಿಯ ಮಹಾಸಭೆಯನ್ನು ತಾ. ೨೦-೮-೫೦ನೇ ಆದಿತ್ಯವಾರ ಹಗಲು ೧೧ ಗಂಟೆಗೆ ವೀರಾಜಪೇಟೆಯಲ್ಲಿ ನಡೆಸಲಾಗುವುದೆಂದು ತಿಳಿಯಬರುತ್ತದೆ.

ಸೋಮವಾರಪೇಟೆ ಶ್ರೀ. ಜಗದ್ಗುರು ಜಯದೇವ ಫ್ರೀಬೋರ್ಡಿಂಗಿಗೆ ಎಡಮನೆ ಮಠದ ಚಂಗಮ ಸೋಮಯ್ಯನವರು (೧೦೦೦) ಒಂದು ಸಾವಿರ ರೂಪಾಯಿಗಳನ್ನೂ, ಇವರ ಧರ್ಮಪತ್ನಿ ಶ್ರೀಮತಿ ಈರಮ್ಮನವರು (೫೧೧) ಐನೂರಹನ್ನೊಂದು ರೂಪಾಯಿಗಳನ್ನೂ, ಜಪದಕಟ್ಟೆ ಮಠದ ಶ್ರೀಮತಿ ನಿಂಗವ್ವನವರು ೫೧೧ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಡಲು ಒಪ್ಪಿರುವರೆಂದು ತಿಳಿದುಬರುತ್ತದೆ.

ಪನವಮಹೋತ್ಸವ ವಾರದಲ್ಲಿ ಉತ್ಸವ ಕೆಲಸ ಮಾಡಿದವರಿಗೆ ಇನಾಮು ಕೊಡುವ ವಿಚಾರ ಮಾಡಲು ಪನಮಹೋತ್ಸವ ಸೆಂಟ್ರಲ್ ಕಮಿಟಿಯ ವಿಶೇಷ ಸಭೆಯು ಈ ತಾ. ೨೧ರಲ್ಲಿ ಮಡಿಕೇರಿಯಲ್ಲಿ ನಡೆಯುವುದು.

ತಾ. ೧೪ರಲ್ಲಿ ನಡೆದ ಕಾಫಿ ಜೋಡ್ ವಿೂಟಿಂಗಿಗಾಗಿ ಅಸಿಸ್ಟೆಂಟ್ ಕವಿೂಷನರವರು ಬೆಂಗಳೂರಿಗೆ ಹೋಗಿರುವರು.

ಕೊರಿಯೂ ಯುದ್ಧ.

ಅಮೇರಿಕಾ ಪ್ರೇರಿತ ಟೋಕಿಯೋ ವಾರ್ತೆ ಹೀಗೆ ಹೇಳುತ್ತದೆ:—

ಕೂಮ್ ನದಿಯ ವರೆಗೆ ಹಿಮ್ಮೆಟ್ಟಿಸಲ್ಪಟ್ಟಿದ ಅಮೇರಿಕಾ ಪಡೆಗಳು ತಾ. ೧೮ರಲ್ಲಿ ಉತ್ತರ ಕೊರಿಯನರ ಮುನ್ನಡೆಯನ್ನು ಟಾಜನ್ ವಿಭಾಗದಲ್ಲಿ ತಡೆದು ನಿಲ್ಲಿಸಿದ್ದಾರೆ. ಟಾಜನ್ ಇನ್ನೂ ಅಮೇರಿಕನರ ಕೈಯಲ್ಲಿದೆ. ಕೊರಿಯೂ ಮತ್ತು ಜಪಾನು ಕರಾವಳಿಯ ವಿೂಲೆಯು ಸಮುದ್ರದಲ್ಲಿ ಶಬ್‌ಮೇರೀನ್‌ಗಳ ಓಡಾಟ ಪ್ರಾರಂಭವಾಗಿದೆ.

ಜನರಲ್ ಮೆಕಾರ್ತರ್‌ರವರು ದಕ್ಷಿಣ ಕೊರಿಯೂದ ಸೇನೆಗಳನ್ನೆಲ್ಲಾ ಪುನಹ ಯೋಗ್ಯ ಶಸ್ತ್ರ ಸಾಹಿತ್ಯ ಸರಬರಾಯಿಯಿಂದ ಸಿದ್ಧಗೊಳಿಸುತ್ತಿದ್ದಾರೆ. ಅಮೇರಿಕನ್ ವಿಮಾನಗಳು ಪ್ರಖರ ಧಾಳಿ ನಡೆಸಿವೆ. ಈ ವಿಮಾನಗಳು ಉತ್ತರ ಕೊರಿಯನರ ೫೧ ಟ್ಯಾಂಕುಗಳನ್ನೂ ೧೪೩ ಟ್ರಕ್ಕುಗಳನ್ನೂ ನಾಶಮಾಡಿವೆ. ಜಪಾನಿನಿಂದ ಕೊರಿಯೂಕ್ಕೆ ೯೫,೦೦೦ ಪೌಂಡು ಭಾರದ ಸಾಹಿತ್ಯಗಳನ್ನೂ ರವಾನಿಸಿವೆ. ದಕ್ಷಿಣ ಕೊರಿಯೂದ ಈಗಿನ ಮುಖ್ಯ ಪಟ್ಟಣವಾದ ಟಾಜನ್ ಇನ್ನೂ ಅಮೇರಿಕದ ಕೈಯಲ್ಲೆ ಇದೆ.

ಈ ವರೆಗಿನ ಯುದ್ಧದಲ್ಲಿ ಸುಮಾರು ೧೧,೦೦೦ ಉತ್ತರ ಕೊರಿಯನರು ಸತ್ತಿರಬಹುದೆಂದು ಜನರಲ್ ಮೆಕಾರ್ಥರು ಅಂದಾಜು ಮಾಡಿರುವರು.

ಕಮ್ಯೂನಿಸ್ಟ್ ಪ್ರೇರಿತ ಹಾಂಗ್‌ಕಾಂಗ್ ವಾರ್ತೆ ಹೀಗೆ ಹೇಳುತ್ತದೆ:—

ಉತ್ತರ ಕೊರಿಯನರು ದಕ್ಷಿಣ ಕೊರಿಯೂದ ಮುಖ್ಯ ನಗರ ಟಾಜನನ್ನು ತಾ. ೧೭ರಲ್ಲಿ ವಶಪಡಿಸಿಕೊಂಡಿರುವರು. ಕಮ್ಯೂನಿಸ್ಟ್ ದಳಗಳು ಟಾಜನಿನ ಪಶ್ಚಿಮ ಭಾಗದ ಕಾಂಜು ನಗರವನ್ನು ವಶಪಡಿಸಿರುವರು. ಸಂಯುಕ್ತ ಅಮೇರಿಕಾದ ವಿಮಾನಗಳು ನಿರಪರಾಧಿ ಜನರ ಮೇಲೆ ಬಾಂಬೆಸೆಯುತ್ತಿರುವರು. ಪೂರ್ವ ಕರಾವಳಿಯ ಅಮೇರಿಕನ್ ಸೇನೆಗಳನ್ನು ಹಿಮ್ಮೆಟ್ಟಿಸಿ ಉತ್ತರ ಕೊರಿಯೂ ಸೇನೆಗಳು ತಾ. ೧೭ರಲ್ಲಿ ಮೂರು ನಗರಗಳನ್ನು ಆಕ್ರಮಿಸಿವೆ. ಉತ್ತರ ಕೊರಿಯೂದ ಗೆರಿಲಾ ಪಡೆ ಮತ್ತು ಸೇನೆಗಳು ಜೊತೆ ಸೇರಿ ಹೆಚ್ಚಿನ ಅಡಚಣೆಯಿಲ್ಲದೆ ಮುಂದರಿಯುತ್ತಿವೆ.

ವಿಮಾನ ಅವಘಡ.

ಡೆಲ್ಲಿಯಿಂದ ಶ್ರೀನಗರಕ್ಕೆ ಹೋಗುತ್ತಿದ್ದ ವಿಮಾನವೊಂದು ಫತಾನ್ ಕೋಟೆಯಿಂದ ೧೫ ಮೈಲಿ ದೂರದ ಜಾಕಿ ನದಿಯ ಪಡಪದಲ್ಲಿ ಮುರಿದು ಬಿದ್ದು ವಿಮಾನದಲ್ಲಿದ್ದ ೧೪ ಜನರೂ ಮೃತರಾದರು. ಮೃತರಾದವರಲ್ಲಿ ಪಂಡಿತ ಜವಾಹರರ ಖಾಸಗಿ ಕಾರ್ಯದರ್ಶಿ ಶ್ರೀ ದ್ವಾರಕನಾಥ್ ಕಚ್ರೂರವರೂ, ಸಂಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯ ಸೈನಿಕ ಪ್ರೇಕ್ಷಕರಾದ ಮೂರು ಜನರೂ, ಇತರ ಮೂರು ಹಿಂದೀ ಸೈನ್ಯದ ಅಧಿಕಾರಿಗಳೂ ಇದ್ದರು. ಅವರ ಶವಗಳನ್ನು ಡೆಲ್ಲಿಗೆ ತಂದು ದಫನ ಕ್ರಿಯೆ ನಡೆಯಿತು.

ಕಾಶ್ಮೀರ ಭೂಸುಧಾರಣೆ.

ಕಾಶ್ಮೀರದ ಶೇಕ್ ಅಬ್ದುಲ್ಲಾ ಸರಕಾರವು ಅತಿ ಕ್ರಾಂತಿಕಾರಕ ಭೂಸುಧಾರಣೆಯನ್ನು ಸೂಚಿಸಿದೆ. ಇದರಂತೆ ೫೦ ಏಕ್ರೆಗಳಿಗಿಂತಾ ಹೆಚ್ಚಿಗೆ ಭೂವಿು ಇರುವವರ ಭೂವಿುಯೆಲ್ಲವೂ ಯಾವದೇ ಪರಿಹಾರವಿಲ್ಲದೆ ಅದನ್ನು ಮಾಡುತ್ತಿರುವ ರೈತರಿಗೆ ಕೊಡಲ್ಪಡುವ ಸೂಚನೆ ಇದರಲ್ಲಿದೆ.

ಸ್ಟಾಲಿನ್-ನೆಹರೂ ಪತ್ರ ವ್ಯವಹಾರ.

ಕೊರಿಯೂ ಯುದ್ಧದಲ್ಲಿ ಶಾಂತಿ ನೆಲೆಸುವಂತೆ ಮಾಡುವ ದೃಷ್ಟಿಯಿಂದ ಪಂಡಿತ ನೆಹರೂರವರು ಸ್ಟಾಲಿನರಿಗೆ ಬರೆದ ಪತ್ರ ಮತ್ತು ಸ್ಟಾಲಿನರ ಉತ್ತರಗಳು ಪ್ರಕಟವಾಗಿವೆ. ಪಂಡಿತ ನೆಹರೂರವರು ತಮ್ಮ ಪತ್ರದಲ್ಲಿ ಚೈನಾಕ್ಕೆ ಸೆಕ್ಯೂರಿಟಿ ಕೌನ್ಸಿಲಿನಲ್ಲಿ ಸ್ಥಾನ ದೊರೆತು ರಷ್ಯಾವು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಾಗವಹಿಸುವ ಅನುವು ಮಾಡುವ ಅವಶ್ಯಕತೆಯನ್ನು, ಎಲ್ಲಾ ರಾಷ್ಟ್ರಗಳು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಕಲೆತು ಜಗತ್ತಿನ ಶಾಂತಿಯ ದೃಷ್ಟಿಯಿಂದ ಕೊರಿಯೂ ಸಮಸ್ಯೆಯನ್ನು ಬಗೆಹರಿಸಬೇಕಾದುದನ್ನೂ ಸೂಚಿಸಿರುವುದಲ್ಲದೆ ಶಾಂತಿಗಾಗಿ ರಷ್ಯಾದ ಕಾತುರತೆಯನ್ನು ವೆಚ್ಚಿರುವರು. ಸ್ಟಾಲಿನರು ತಮ್ಮ ಉತ್ತರದಲ್ಲಿ ನೆಹರೂರವರ ಪ್ರಯತ್ನವನ್ನು ಸ್ವಾಗತಿಸಿ ಸೆಕ್ಯೂರಿಟಿ ಸಭೆಯು ಕೊರಿಯೂದ ಪ್ರತಿನಿಧಿಗಳ ಅಭಿಪ್ರಾಯವನ್ನು ಕೇಳುವ ಅವಶ್ಯಕತೆಯನ್ನು ಸೂಚಿಸಿರುವರು.

ಕಾಶ್ಮೀರ ಸಮಸ್ಯೆ.

ಕಾಶ್ಮೀರ ಸಮಸ್ಯೆಯ ಬಗ್ಗೆ ಒಂದು ಮಾರ್ಗವನ್ನು ಹುಡುಕುತ್ತಿರುವ ಸಂಯುಕ್ತ ರಾಷ್ಟ್ರಸಂಘದ ಸರ್ ಓವೆನ್ ಡಿಕ್ಸನ್‌ರವರು ಪಾಕಿಸ್ತಾನ ಮತ್ತು ಹಿಂದೂಸ್ಥಾನ ಮುಖ್ಯಮಂತ್ರಿಗಳ ಭೇಟಿಯನ್ನು ತಾ. ೨೦ರಲ್ಲಿ ಡೆಲ್ಲಿಯಲ್ಲಿ ಏರ್ಪಡಿಸಿರುವರು. ಕಾಶ್ಮೀರ ಸಮಸ್ಯೆಯ ಬಗ್ಗೆ ಡಿಕ್ಸನರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಬಗೆಹರಿಸಲಾರದ ತೊಡರುಗಳೇನೂ ಅದರಲ್ಲಿ ಇಲ್ಲವೆಂದಿರುವರು.

ರಾಜಗೋಪಾಲಾಚಾರಿ.

ಊಟಿಯಲ್ಲಿ ಶರೀರಾರೋಗ್ಯದ ದೃಷ್ಟಿಯಿಂದ ಕೆಲವು ದಿನ ಇದ್ದ ರಾಜಗೋಪಾಲಾಚಾರಿಯವರು ಡೆಲ್ಲಿಗೆ ಹೋಗಿ ಕೇಂದ್ರ ಮಂತ್ರಿಮಂಡಳದಲ್ಲಿ ಅಧಿಕಾರ ವಹಿಸಿಕೊಂಡಿರುವರು. ಅವರಿಗೆ ಇನ್ನೂ ಯಾವುದೇ ಇಲಾಖೆಯ ಜವಾಬ್ದಾರಿ ಕೊಡಲ್ಪಟ್ಟಿರುವದಿಲ್ಲ. ಅವರು ಈಗ 'ಪೋರ್ಟ್‌ಫೋಲಿಯೊ' ಇಲ್ಲದ ಮಂತ್ರಿಯಾಗಿರುವರು.

ಮೊರಾಟಕ್ಕಿದೆ.

ಮಡಿಕೇರಿಯ ವ್ಯಾಪಾರ ಕೇಂದ್ರವಾದ ಜಾಕಿಯಲ್ಲಿ ಹೋಟೆಲು ಯಾ ಅಂಗಡಿ ಇಡಲು ಮತ್ತು ವಾಸಕ್ಕೂ ಯೋಗ್ಯವಾಗಿರುವ ಮನೆಯೊಂದು ಮೊರಾಟಕ್ಕಿದೆ. ಖರೀದಿದಾರರು ಈ ಕೆಳಗಿನ ಅಡ್ರೆಸಿಗೆ ಬರೆದುಕೊಳ್ಳಬಹುದು.

"A."
C/o 'KODAGU' Mercara.
3-1

ಓದುಗರ ಓಲೆಗಳು.

ಸ್ಕೂಲ್ ಫೈನಲ್ ಸಪ್ಲಿಮೆಂಟರಿ ಪರೀಕ್ಷೆ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪ್ರಸಾರಾಂಗದ ವಿದ್ಯಾರ್ಥಿಗಳ ಮುಂಬರುವ ಅಂದರೆ ಅಕ್ಟೋಬರ್ ಪ್ರಥಮ ವಾರದಲ್ಲಿ ನಡೆಸಲಿರುವ ಸಪ್ಲಿಮೆಂಟರಿ ಪರೀಕ್ಷೆಗೆ ಕೂರಬೇಕಾಗಿದೆ. ಸಪ್ಲಿಮೆಂಟರಿ ಪರೀಕ್ಷೆಗೆ ಕಳೆದ ಪರೀಕ್ಷೆಗಿದ್ದ ಪಾಠ ವಿಷಯಗಳನ್ನೆ ಇಡುವದು ಪದ್ಧತಿ. ಆದರೆ ಈ ಸಾರಿ ಕೆಲವು ಹೊಸ ಪಾಠಗಳನ್ನು ಸೇರಿಸಿರುವರು. ಇದು ನಿಜವಾಗಿಯೂ ವಿದ್ಯಾರ್ಥಿಗಳಿಗೆ ತೊಡರಾಗುವದು. ಕಳೆದ ಪರೀಕ್ಷೆಗೆ ಪದಾಸ್ ಪ್ರಾಂತದಲ್ಲಿ ಕುಳಿತ ಸುಮಾರು ೬,೯೦೦ ವಿದ್ಯಾರ್ಥಿಗಳಲ್ಲಿ ಳತ,೦೦೦ ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಸೋತ ಹೋಗಿದ್ದಾರೆ. ಸಪ್ಲಿಮೆಂಟರಿ ಪರೀಕ್ಷೆಗೆ ಕಟ್ಟೂರಿ ಮಾಡಿಕೊಳ್ಳಲು ಯೋಗ್ಯ ಅನುಕೂಲತೆಯಿಲ್ಲದೆ ಕಷ್ಟಪಡುತ್ತಿರುವಾಗ ಪುನಹ ಹೊಸ ಪಾಠಗಳೆಂದರೆ ಅನ್ಯಾಯ. ಆದ್ದರಿಂದ ಪರೀಕ್ಷಾ ಬೋರ್ಡಿನವರು ಹೊಸ ಪಠ್ಯಭಾಗಗಳನ್ನು ರದ್ದು ಮಾಡಬೇಕು.

ಕೊಡಗಿನಲ್ಲಿ ಪರೀಕ್ಷೆಗೆ ಕೂತ ವಿದ್ಯಾರ್ಥಿಗಳಲ್ಲಿ ಸುಮಾರು ೩೦೦ ಕ್ಕೂ ಮಿಕ್ಕಿ ಸೋತವರಿದ್ದಾರೆ. ಇವರಿಗೆ ಸಪ್ಲಿಮೆಂಟರಿ ಪರೀಕ್ಷೆಗೆ ಕೂರುವರೆ ಯೋಗ್ಯ ರೀತಿ ತರಬೇಕಿನ ಅನುಪಲ್ಲ ಮೀರಾಜಪೇಟೆಯಲ್ಲಿ ಒಂದು ತರಗತಿಯನ್ನು ಕೆಲವರು ತೆರೆಸಿರುವರಂತೆ. ಅದೇ ರೀತಿ ಮಡಿಕೇರಿಯಲ್ಲೊಂದು ತೆರೆಯಲ್ಪಟ್ಟರೆ ಅನೇಕ ವಿದ್ಯಾರ್ಥಿಗಳಿಗೆ ಸಹಾಯವಾಗುವದು. ಇನ್ನು ಪರೀಕ್ಷೆಗೆ ಕೇವಲ ಎರಡೂವರೆ ತಿಂಗಳಿರುವ ಕಾರಣ ಶೀಘ್ರ ಈ ಏರ್ಪಾಡು ಮಾಡಿದಷ್ಟು ಒಳಿತು.

ಹಿತಚಿಂತಕ.

ಆರಾಮು ಕುರ್ಚಿ ಅಡಳಿತ?

ಕೊಡಗಿನ ಅಡಳಿತವು ಆರಾಮು ಕುರ್ಚಿ ಅಡಳಿತವಾಗಿ ತೊಡಗಿದೆಯೆಂದು ನಾನು ಕಳೆದ ವಾರ ಬರೆದಿದ್ದೆನು. ಅದಕ್ಕೆ ಕೆಲವು ಕಾರಣಗಳನ್ನೂ ಕೊಟ್ಟಿದ್ದೆನು. ಈ ಪತ್ರದಲ್ಲಿ ಅದಕ್ಕೆ ಇನ್ನೂ ಕೆಲವು ಕಾರಣ ಕೊಡಬೇಕಾಗಿದೆ.

ನಮ್ಮ ಕಾಲೇಜಿನಲ್ಲಿ ಹೆಚ್ಚಿನ ತರಗತಿ ತೆರೆಯಲ್ಪಟ್ಟಿರುವದರಿಂದ ಲೆಕ್ಚರರುಗಳ ಅವಶ್ಯಕತೆ ಇದೆಯೆಂಬುದನ್ನು ಗಮನಿಸಿ ಸರಕಾರವು ಈ ವರೆಗೆ ಯಾವ ಏರ್ಪಾಡೂ ಮಾಡಲಿಲ್ಲ. ಬದಲು ಕಾಲೇಜು ತೆರೆದ ನಂತರ ಅಂದರೆ ತಾರೀಕು ೩-೭-೫೦ ರಲ್ಲಿ 'ಸ್ಟಾಫ್ ಸಿಲೆಕ್ಷನ್' ಬೋರ್ಡು ವಿೂಟಿಂಗು ನಡಿಸಿ ಅನೇಕರು ವಾರರನ್ನು ಪರೀಕ್ಷಿಸಿದರು. ಈ ಪರೀಕ್ಷೆಯು ನಡೆದು ಇಂದಿಗೆ ೧೫ ದಿನಗಳಾದರೂ ಯಾರ ನೇಮಕವೂ ಆಗಿಲ್ಲವೆಂದರೆ ಈ ಚಾರಿತ್ರಿಕ ನಿಧಾನಕ್ಕೆ ಏನು ಹೇಳುವೀಕ? ಏನು ಈ ನೇಮಕಕ್ಕೆ ಹೆಲ್ಲಿಯಿಂದ ಆಜ್ಞೆ ಬರಬೇಕೆ? ೧೫ ದಿನಗಳೊಳಗೆ ಡೆಲ್ಲಿಯಿಂದಲಾದರೂ ಆಜ್ಞೆ ಬರಬಹುದಿತ್ತು. ಆದರೆ ಚೀಫ್ ಕಮಿಷನರ ಮೂಗಿನ ಕೆಳಗೋ ಎಂಬಂತಿರುವ ಕಾಲೇಜಿಗೆ ಆಜ್ಞೆ ಬಂದಿಲ್ಲವೆಂದರೆ ಕೊಡಗಿನವರ ದುರಾದೃಷ್ಟವೆನ್ನದೆ ಬೇರೆ? ಕಾಲೇಜಿನಲ್ಲಿ ಅಧ್ಯಾಪಕರಿಲ್ಲದೆ ಜೂನಿಯರ್ ತರಗತಿಯ ವಿದ್ಯಾರ್ಥಿಗಳು ಕಾಲಹರಣ ಮಾಡಬೇಕಾಗಿ ಬಂದಿದೆ. ಇನ್ನಾದರೂ ಶೀಘ್ರ ವರ್ತಿಸಬಾರದೆ?

'ವಿದ್ಯಾಭಿಮಾನಿ'

'ಬರೇಗುಲ್ಲ, ನಿಡ್ತೆಗೇಡು.'

ಕೇಂದ್ರದಿಂದ ಏರ್ಪಡಿಸಲ್ಪಟ್ಟ ಸೆಂಟ್ರಲ್ ವಾಟರ್, ಇರಿಗೇಶನ್ ಮತ್ತು ನೇವಿಗೇಶನ್ ಇಲಾಖೆಯು ಬೇರೆ ಕಡೆಗಳಲ್ಲಿ ಯಾವರೀತಿ ರೀತಿಗೆ ಅರ್ಹವಾಗಿ ಇತ್ತಲಾಗಿ ಅದರ ಕೆಲಸ ಕಾರ್ಯಗಳು ಸಂಕುಚಿತಗೊಳಿಸಲ್ಪಟ್ಟವೋ ಅದೇ ರೀತಿ ಕೊಡಗಿನಲ್ಲಿಯೂ ಅದರ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯಲಿಲ್ಲ. ಲಕ್ಷ್ಮಣತೀರ್ಥ ಅಣೆಕಟ್ಟಿನ ವಿಚಾರ ಪರಿಶೀಲಿಸಿ ಯೋಜನೆ ತಯಾರಿಸಿ ಕೆಲಸ ಪ್ರಾರಂಭಿಸುವದೆಂದಾಯಿತು. ಇತ್ತಲಾಗಿ ಪುನಹ ಯಾರೋ ಬಂದು ಆ ಸ್ಥಳವನ್ನು ನೋಡಿ ಕಟ್ಟಿಯು ಇನ್ನೂ ಐದು ಮೈಲು ಮೇಲೆ ಬೇರೊಂದು ಸ್ಥಳದಲ್ಲಿ ನಿಲ್ಲಬೇಕೆಂದು ಹೇಳಿರುವರಂತೆ! ಈ ವರೆಗೆ ಮಾಡಿದ ಅಂದಾಜು, ಯೋಜನೆಗಳು ಪುನಹ ಮಾರ್ಪಡಬೇಕಾಗುವದು! ಅದಕ್ಕೆ ಪುನಹ ಬಡ ರೈತನ ಹಣದ ಪೆಚ್ಚು! ಹೀಗಂಗಿ ನೀರಾವರಿಯೋಜನೆಯು ಪರಿಶೀಲನೆಯಲೂ ನಡೆದಿದೆಯಂತೆ! ಆದು ಎಲ್ಲಿಗೆ ಮುಟ್ಟಿದೆಯೋ ದೇವರೇ ಬಲ್ಲ ಅಧಿಕಾರಿಗಳು ಬರುತ್ತಾರೆ. ನೋಡುತ್ತಾರೆ. ವರದಿ ಮಾಡುತ್ತಾರೆ. ಇವರ ಈ ಪರಿಶೋಧನೆಗಾಗಿ ವೆಚ್ಚವಾದ ಹಣದಿಂದಲೇ ಸಾಧಾರಣದ ಅಣೆಕಟ್ಟು ಆಗಬಹುದಿತ್ತೇನೊ! ಇಷ್ಟೆಲ್ಲ ನೋಡಿ ಏನು? ಎಲ್ಲವೂ ನಿರಾಶೆ. ಲಕ್ಷ್ಮಣತೀರ್ಥವೂ ಇಲ್ಲ; ಹಾರಂಗಿಯೂ ಇಲ್ಲ. ಬರಪೊಳೆಯೋಜನೆ ಮತ್ತೆ ಹೇಳುವದೇ ಬೇಡ ಹೀಗಾಗಿದೆ.

ಯುದ್ಧಾನಂತರ ಕಾಗದದಲ್ಲಿ ಹೊರಟ ಯೋಜನೆಗಳು ಒಂದೆರಡಲ್ಲ ಆದರೆ ರೈತನ ಹಿತದೃಷ್ಟಿಯಿಂದ ಒಂದೇ ಯೋಜನೆ ಈ ವರೆಗೆ ಜಾರಿಯಲ್ಲಿ ಬಂದಿರುವದಿಲ್ಲ. ಇತ್ತಲಾಗಿ ಕೇಂದ್ರ ಸರಕಾರದ ಖರ್ಚು ಮೋತಿಯ ಕಟ್ಟಪ್ಪಣೆಯು ಎಲ್ಲದಕ್ಕೂ ಪೂರ್ಣ ವಿರಾಮ ಹಾಕಿದಂತಿವೆ. ಪರದಾಸ್ಯವೋ, ಸ್ವಾತಂತ್ರ್ಯವೋ ಬಡ ರೈತನ ಸ್ಥಿತಿ ಅಂದೂ ಇಂದೂ ಎಲ್ಲಾ ಒಂದೆ.

C. K T.

ಸಿ. ಪಿ. ಡಬ್ಲ್ಯು. ಡಿ.

ಕೇಂದ್ರದ ಪಿಡಿತದಲ್ಲಿರುವ ಪಬ್ಲಿಕ್ ವರ್ಕ್ಸ್ ಇಲಾಖೆಯು ಕೆಲಸ ಕಾರ್ಯಗಳು ತೀರಾ ಅತೃಪ್ತಿಕರವೆಂದು ಹಲವು ಬಾರಿ ಟೀಕೆಗೀಡಾಗಿದೆ. ಕಳೆದ ಕೌನ್ಸಿಲಿನಲ್ಲಿ ಪ್ರತಿ ಸದಸ್ಯನೂ ಇದರ ಕೆಲಸವನ್ನು ಟೀಕಿಸಿದ್ದಾನೆ. ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ. ಈ ಇಲಾಖೆಯು ಎಲ್ಲಿ ಯಾವ ಕೆಲಸ ಮಾಡುತ್ತಿದೆಯೋ ದೇವರೇ ಬಲ್ಲ. ಮಡಿಕೇರಿ ಕೊಡಗಿನ ರಾಜಧಾನಿ. ಮಡಿಕೇರಿಯಿಂದ ಮಹದೇವಪೇಟೆಗಾಗಿ ಮಾದಾಪುರಕ್ಕೆ ಹೋಗುವ ರಸ್ತೆ ನೋಡಬೇಕು. ಕಳೆದ ಹತ್ತು ವರ್ಷಗಳಿಂದ ಯಾವ ರಿಪೇರಿಯೂ ಇಲ್ಲದೆ ಇದೆ. ವೀರಾಜಪೇಟೆ-ಕಟ್ಟೆ ರಸ್ತೆಯನ್ನು ಚೀಫ್ ಕಮಿಷನರು ನೋಡಬೇಕು. ಬಹುಶಃ ಹೊಸ ಕಾರು ಇರುವ ಅವರು ಈ ಪ್ರಯತ್ನ ಮಾಡಲಾರರು! ಈ ರೀತಿಯ ಕರ್ತವ್ಯನ್ಯೂನತೆಯನ್ನು ಜನತೆ ಸಹಿಸಿ ಕೂತಿದೆ! ಸ್ಥಳೀಯ ಸರಕಾರವು ಈ ಇಲಾಖೆಯನ್ನು ಪುನಹ ತನ್ನ ಹತೋಟಿಗೆ ತರಲು ಯತ್ನಿಸುವದಲ್ಲದೆ ಈ ಇಲಾಖೆಯು ಸ್ವಲ್ಪ ಎಚ್ಚೆತ್ತು ವರ್ತಿಸುವಂತೆ ನೋಡಬೇಕು.

'ಪ್ರಯಾಣಿಕ.'

ವೇತನಕ್ಕೆ ಸರಿಯಾದ ದುಡಿವೆ?

ಕೊಡಗಿನ ಜಿಲ್ಲಾ ಬೋರ್ಡು ಉದ್ಯೋಗಿಗಳ ಕೂಗೊಂದು ಹಲವು ವರ್ಷಗಳಿಂದ ಕೇಳಿಬರುತ್ತಿದ್ದರೂ ಅವರ ಬೇಡಿಕೆಗಳು ಈ ವರೆಗೂ ಸಲ್ಲಿಸಲ್ಪಡದಿರುವ ಕಾರಣ ಅವರ ಕೂಗೂ ನಿಂತಿಲ್ಲ. ಇತ್ತಲಾಗಿ ನೇತನಕ್ಕೆ ಸರಿಯಾದ ಕೆಲಸ ಮಾಡಿಯುಳಿದ ದಿನಗಳಲ್ಲಿ ಕೆಲಸ ಮಾಡದೆ ವಟಪಕ್ಕರ ಹೂಡುವ ಮಾತುಗಳೂ ಕೇಳಿಬರುತ್ತಿವೆ.

ಕೊಡಗು ಜಿಲ್ಲಾ ಬೋರ್ಡು ಉದ್ಯೋಗಿಗಳ ವೇತನವು ಈ ಮೊದಲೊಮ್ಮೆ ಚೀಫ್ ಕಮಿಷನರು ಅಂದು ಭಾಷಣದಲ್ಲಿ ಹೇಳಿದಂತೆ ಮೈಸೂರು ಯ ಮದ್ರಾಸಿನ ಬೋರ್ಡು ಉದ್ಯೋಗಿಗಳ ವೇತನಕ್ಕಿಂಥಾ ಹೆಚ್ಚಿರಬಹುದು. ಆದರೆ ಅಸಮಾನತೆಯ ಗುಟ್ಟು ಅಲ್ಲಿಲ್ಲ. ಒಂದೇ ರೀತಿ ಕೆಲಸ ಮಾಡುತ್ತಿರುವ ಜಿಲ್ಲಾ ಬೋರ್ಡು ಮತ್ತು ಸರಕಾರಿ ಉದ್ಯೋಗಿಗಳ ವೇತನದಲ್ಲಿರುವ ಮಹಾ ಅಂತರವೇ ಈ ಅಸಮಾನತೆಯಲ್ಲಿ ನ್ಯಾಯವಿಲ್ಲ. ಕೆಲಸಕ್ಕೆ ತಕ್ಕ ವೇತನವಲ್ಲದೆ ಅತನು ಅಂಥವ, ಈತನು ಇಂಥವನೆಂದಲ್ಲ. ಆದ್ದರಿಂದ ಜಿಲ್ಲಾ ಬೋರ್ಡು ಉದ್ಯೋಗಿಗಳ ವೇತನವು ಸರಕಾರಿ ಉದ್ಯೋಗಿಗಳಂತೆಯೇ ಇರಬೇಕು. ಇಲ್ಲವೇ ಸರಕಾರಿ ಉದ್ಯೋಗಿಗಳ ವೇತನ ಜಿಲ್ಲಾ ಬೋರ್ಡಿನ ಉದ್ಯೋಗಿಗಳ ವೇತನದ ಮಟ್ಟಕ್ಕೆ ಇಳಿಯಬೇಕು. ಈ ರೀತಿಯಾದರೆ ಮಾತ್ರ ಈ ಪ್ರಶ್ನೆ ಬಗೆ ಹರಿಯುವದು!

ಹೀಗೆ ಅತೃಪ್ತರಾಗಿರುವ ಅಧ್ಯಾಪಕರ ಗೈಯಲ್ಲೇ ಕೊಡಗಿನ ವಿದ್ಯಾಭ್ಯಾಸವಿರುವದರಿಂದ ಪಾಠಪ್ರವಚನಗಳು ಸರಿಯಾಗಿ ನಡೆಯದೆ ವಿದ್ಯಾರ್ಥಿಗಳು ದಿನವಹಿ ಕೆಳಗಿಳಿಯುತ್ತಿದೆ. ಈ ಸಮಸ್ಯೆಯನ್ನು ಸುವಾರಿಸಲು ಕೌನ್ಸಿಲು ಮತ್ತು ಜಿಲ್ಲಾ ಬೋರ್ಡು ಸದಸ್ಯರ ವಿಿಟಿಂಗೊಂದನ್ನು ಚೀಫ್ ಕಮಿಷನರು ಏರ್ಪಡಿಸಿದ್ದರು. ಆದರಲ್ಲಿ ಏನು ನಡೆಯಿತೋ ತಿಳಿಯದು. ಹೇಗೂ ಸಮಸ್ಯೆ ಹಿಂದಿನಂತೆಯೇ ಇದೆ. ಇದು ಪ್ರಕೋಪಕ್ಕೆ ಮುಟ್ಟದಂತೆ ಸರಕಾರವೂ, ಸಾರ್ವಜನಿಕ ಮುಂದಾಳುಗಳೂ ಸಹಕರಿಸಿ ಯೋಗ್ಯ ದಾರಿಯನ್ನು ಕಂಡು ಹಿಡಿಯುವರೇ? 'ದೇವಯ್ಯ.'

ನಾಪೋಕ್ಲುನಾಡಿನವರ ದುರದೃಷ್ಟ.

ನಾಪೋಕ್ಲುನಾಡು ಹಿಂದುಳಿದನಾಡೆಂದು ಪರನಾಡಿನವರ ಹೇಳಿಕೆ. ಕೆಲವು ಪುಣ್ಯಾತ್ಮರ ಅಚಲಶ್ರದ್ಧೆ, ಉತ್ಸಾಹ ಮತ್ತು ನಿಸ್ವಾರ್ಥಸೇವೆಯ ಫಲದಿಂದಾಗಿ ಒಂದು ಹೈಸ್ಕೂಲು ಸ್ಥಾಪನೆಯಾಯಿತು. ಮುಂದಿನ ಮಕ್ಕಳಿಗೆ ಅನುಕೂಲವಾಗಿ ಭವ್ಯವಾದ ಕಟ್ಟಡಗಳೂ ತಯಾರಾಗುತ್ತಿವೆ. ಇದರ ಸನ್ನಿವೇಶ ಮತ್ತು ಕ್ರಮಗಳನ್ನು ನೋಡಿ ಇತರರು ಮೂಗಿನ ಮೇಲೆ ಬೆರಳಿಟ್ಟು ಆಶ್ಚರ್ಯಪಡುವಂತಾಗಿದೆ. ಕೊಟ್ಟಮುಡಿ ಸೇತುವೆಯೊಂದು ಸರಕಾರದ ಧೋರಣೆಯಿಂದ ಇನ್ನೂ ಗಣಪತಿ ಮದುವೆಯಾಗಿಯೇ ಉಳಿದಿದೆ. ಈ ನಾಡಿಗೆ ಸಾರ್ವಜನಿಕರ ಪ್ರಯೋಜನಾರ್ಥವಾಗಿ ಸರಕಾರದಿಂದ ದೊರಕಿದ ಯಾಯಿತಿಗಳೇ ಕಡಮೆ. ಈಗ ಕುರುವಿನ ಮೇಲೆ ಬೊಕ್ಕೆ ಎಂಬಂತೆ ಮಡಿಕೇರಿಗೆ ಬಂದ ಮೊದಲಿನ ದಿನದ ಟಪ್ಪಾಲು ಮೂರನೆ ದಿನ ಸಾಯಂಕಾಲದ ಬಸ್ಸಿನಲ್ಲಿ ನಾಪೋಕ್ಲಿಗೆ ತಲುಪುವಂತೆ ಏರ್ಪಾಡು ನಡೆದಿದೆ. ಇಷ್ಟರ ವರೆಗೆ ಮಡಿಕೇರಿಯಿಂದ ಭಾಗಮಂಡಲದ ಒಳನಲ್ಲಿ ಬೆಟ್ಟಗೇರಿಗೆ ಟಪಾಲು ಬಂದು ಅಲ್ಲಿಂದ ರನ್ನರ್ ಮೂಲಕ ೧೨-೩೦ ಗಂಟೆಗೆ ಟಪ್ಪಾಲುಬಟವಾಡೆಯಾಗುತ್ತಿತ್ತು. ಆದರೀಗಿನ ಏರ್ಪಾಡಿನಿಂದ ಬಹಳ ತೊಂದರೆಯಾಗಿದೆ. ಕಾಲಚಕ್ರ ಅತ್ಯಗ್ರವಾಗಿ ತಿರುಗುತ್ತಿದೆ. ಜನರೆಲ್ಲರೂ ತಮ್ಮ ತಮ್ಮ ಪತ್ರವ್ಯವಹಾರಗಳಿಗೂ, ವಾರ್ತಾಪತ್ರಗಳಿಗೂ ಕಾದಿರುವುದಲ್ಲದೆ ಎಷ್ಟು ಬೇಗನೆ ತಮ್ಮ ಕೆಲಸಗಳನ್ನು ಪೂರೈಸಿಕೊಳ್ಳಬಲ್ಲೆವೆಂದು ಸಂಶೋಧನೆ ನಡೆಯುತ್ತಲೇ ಇರುವಲ್ಲಿ ಹೊರ ದೇಶದ ಟಪ್ಪಾಲು ಮಡಿಕೇರಿ ವೀರಾಜಪೇಟೆಗೆ ತಲುಪಿ ಇಪ್ಪತ್ತನಾಲ್ಕು ಘಂಟೆಗಳ ನಂತರ ಬರೇ ಮೂರು ನಾಲ್ಕು ಘಂಟೆಗಳ ನಡತೆಯ ದೂರದಲ್ಲಿರುವ ನಾಪೋಕ್ಲಿನವರಿಗೆ ದೊರೆಯುತ್ತಿದೆ. ಈಗಿನ ಏರ್ಪಾಡಿನಂತೆ ವೀರಾಜಪೇಟೆಯಿಂದ ೩-೩೦ಕ್ಕೆ ಹೊರಡುವ ಟ್ರಾನ್ಸ್‌ಪೋರ್ಟು ಬಸ್ಸಿನಲ್ಲಿ (ಇವರ ಖಾಯಂ ಲೈನು ಬಸ್ಸು) ಟಪ್ಪಾಲು ಸಾಯಂಕಾಲ ೫-೩೦ಕ್ಕೆ ತಲಪುವಂತೆ ಏರ್ಪಾಡಾಗಿದೆ. ಇದರಿಂದಾಗಿ ಬಸ್ಸಿನ ಮಾಲೀಕರನ್ನು ಪ್ರೋತ್ಸಾಹಿಸುವ ಹಾಗೂ ಪದ ಪಡಪಾಯಿಗಳ ನೆಮ್ಮದಿಗೆ ಭಂಗ ತರುವ ಉದ್ದೇಶ ಒಂದು ಕಾರಣವೇ ಅಲ್ಲದೆ ಜನಸಾಮಾನ್ಯರ ಪ್ರಯೋಜನವನ್ನು ಲಕ್ಷಿಸಿದಂತೆ ಒಂದಿಷ್ಟೂ ಕಂಡುಬರುವದಿಲ್ಲ. ಒಂದು ಕ್ರಮದಿಂದ ಇನ್ನೊಂದು ಕ್ರಮಕ್ಕೆ ಬದಲಾಯಿಸುವಾಗ ಅದರಿಂದ ಉಪಕಾರವಾಗಬೇಕು. ಈಗ ನಡೆದಿರುವ ಟಪ್ಪಾಲು ಇಲಾಖೆಯವರ ವರ್ತನೆಯಿಂದ ಯಾವ ಸೌಕರ್ಯ ಒದಗಿದಂತಾಯಿತು ಎಂಬುದು ತಿಳಿಯುವುದಿಲ್ಲ. ಆದ್ದರಿಂದ ವೀರಾಜಪೇಟೆಯಿಂದ ಬೆಳಿಗ್ಗೆ ಹೊರಟು ನಾಪೋಕ್ಲಿಗೆ ಹತ್ತು ಗಂಟೆಯ ಒಳಗೆ ತಲಪುವಂತೆ ಒಪ್ಪುವ ಯಾವ ಬಸ್ಸಿಗಾದರೂ ಟಪ್ಪಾಲನ್ನು ವಹಿಸಿದರೆ ತಿರುಗಾಟದ ಸಾರ್ವಜನಿಕರಿಗೂ ಟ

(ಮುಂದಿನ ಪುಟದ ಎನೇ ಕಲಂ ನೋಡಿ)

ಭೀತಿ ಯೂ ಪ್ರೀತಿ ಇಲ್ಲದೆ-

ಲೇ:- "ಗುಪ್ತ" ಮಡಿಕೇರಿ

ಭಾರತದ ವಿದೇಶ ನೀತಿ

ಹಿಂದೂದೇಶವು ತನ್ನ ವಿದೇಶ ನೀತಿಯ ಬಗ್ಗೆ ಅತ್ಯಂತ ಕಠಿಣ ತಾಟಸ್ಥ್ಯವನ್ನು ವಹಿಸುವದೆಂದು ಸ್ಪಷ್ಟಪಡಿಸಿದೆ. ಅಂತರಾಷ್ಟ್ರೀಯ ರಂಗದಲ್ಲಿ ಯಾವದೇ ಶಕ್ತಿ ಶಾಹೀ ಪಕ್ಷದ ಪರ ನಿಲ್ಲದೆ ಸರಿ ತೋರಿದಂತೆ ಮಾಡುವ ವಿಧಾನವನ್ನು ಕೈಕೊಂಡಿದೆ ಇಂಥಾ ಒಂದು ನೀತಿಗೆ ಹೆಚ್ಚಾಗಿ ಪಂಡಿತ ಜವಾಹರರು ಕಾರಣರು. ಅಮೇರಿಕವಿರಲಿ ಯಾ ರಷ್ಯಾವಿರಲಿ, ಹಿಂದೂದೇಶವು ಯಾವದಾದರೂ ಒಂದು ಕಡೆ ನಿಂತುದೇ ಆದರೆ ಅದು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು ಯಾವದಾದರೊಂದು ಶಕ್ತಿ ಶಿಬಿರದಲ್ಲಿ ಸೇರಿಹೋಗಿ ಜಗತ್ತಿನ ಶಾಂತಿಗೆ ತನ್ನ ಕೈಯಲ್ಲಾಗುವ ಸೇವೆಯನ್ನು ಸಲ್ಲಿಸಲು ಸಾಧ್ಯವಾಗದು. ಆದ್ದರಿಂದ ಹಿಂದೂದೇಶವೂ ಪ್ರತಿಯೊಂದು ಘಟನೆಯನ್ನೂ ಮತಿಯ ಒರೆಗಲ್ಲಿಗೆ ಹಚ್ಚಿ ಅದರಂತೆ ನಡೆಯುತ್ತಿದೆ.

ಕೊರಿಯಾದಲ್ಲಿ ನಡೆದ ಯುದ್ಧ ಪ್ರಕರಣದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ನಿರ್ಣಯವನ್ನು ಸಮರ್ಥಿಸಿತು. ದಕ್ಷಿಣ ಕೊರಿಯಾದ ಮೇಲೆ ಯುದ್ಧ ಸಾರಿದ್ದು ಜಗತ್ತಿನ ಶಾಂತಿಗೆ ಭಂಗ ತಂದಂತೆ; ಸಂಯುಕ್ತ ರಾಷ್ಟ್ರ ಸಂಘದ ಗುರಿಯನ್ನು ಅಲ್ಲಗಳೆದಂತೆ ಎಂದಿತು. ಆದ್ದರಿಂದ ಉತ್ತರ ಕೊರಿಯಾದ ಕಮ್ಯೂನಿಸ್ಟ್ ದಳವನ್ನು ಧಾಳಿಗಾರರೆಂದು ವಿರೋಧಿಸಿತು ಇದರಿಂದ ಹಲವರು ಹಿಂದೂದೇಶವು ಅಮೇರಿಕನರ ಪಕ್ಷ ಸೇರಿದೆ ಎಂದು ತೀಕಿಸುತ್ತಾರೆ.

ಇನ್ನೊಂದು ಉದಾಹರಣೆಯನ್ನು ಹೇಳಬೇಕಾದರೆ ಕಮ್ಯೂನಿಷ್ಟ್ ಚೀನಾದ ಪ್ರತಿನಿಧಿಗಳಿಗೆ ಈವರೆಗೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಳ ಕೊಡದೆ ನಾವೂವ ಶೇಷವಾಗಿರುವ ಚಿಯಾಂಗ್ ಆಡಳಿತದ ಚೀನ್ನನ್ನೇ ಅಮೇರಿಕಾವು ತಟ್ಟುತ್ತಿದೆ. ಜಗತ್ತಿನ ಎಲ್ಲಾ ರಾಷ್ಟ್ರಗಳಿಗಿಂಥಲೂ ದೊಡ್ಡದಾಗಿರುವ ಚೀನಾದ ಸುಮಾರು ೫೦ ಕೋಟಿ ಜನರಿಗೆ ಪ್ರಾತಿನಿಧ್ಯವಿಲ್ಲದ ಸಂಯುಕ್ತ ರಾಷ್ಟ್ರ ಸಭೆಯು ಹಾಸ್ಯಾಸ್ಪದವಾದುದು. ಈ ಪ್ರಶ್ನೆಯು ಮೇಲೆಗೆ ರಷ್ಯಾವು ಸಂಯುಕ್ತ ರಾಷ್ಟ್ರ ಸಂಘದಿಂದ ದೂರ ನಿಂತಿದೆ. ಈ ಪ್ರಶ್ನೆಯಲ್ಲಿ ಹಿಂದೂದೇಶವು ಚೀನಾದ ಪರ ವಾದಿಸುತ್ತಿದೆ. ಚೀನಾಕ್ಕೆ ಸ್ಥಳ ಕೊಡಬೇಕೆಂದು ಪ್ರಯತ್ನಿಸುತ್ತಿದೆ. ಇದರಿಂದ ಕೆಲವರು ಹಿಂದೂದೇಶವು ರಷ್ಯಾದ ಪರ ವಾದಿಸುತ್ತಿದೆಯೆಂದೂ ಹೇಳುತಿದ್ದಾರೆ. ಆನೆ ಮನಟ್ಟದ ಕುರುಡರು ಆನೆಯನ್ನು ಕಂಬದಂತಿದೆ, ಮೊರದಂತಿದೆಯೆಂದುಹೇಳಿದಂತೆ ಸರಿದಾರಿಯಿಂದ ಸಾಗುತ್ತಿರುವ ಭಾರತ ವಿದೇಶ ನೀತಿಯನ್ನು ಚಿಕ್ಕ ದೃಷ್ಟಿಯ ಹಲವರು ಹಲವು ವಿಧದಿಂದ ತೀಕಿಸುತ್ತಿದ್ದಾರೆ.

ಭಾರತದ ಚಿಕ್ಕೆ ಏರುತ್ತಿದೆ.

ಕೊರಿಯಾ ಸಮಸ್ಯೆಯನ್ನು ಪ್ರಪಂಚದ ರಂಗಕ್ಕೆ ಹಬ್ಬದಂತೆ ಅದನ್ನು ತೀರ್ಮಾನಿಸುವ ದೃಷ್ಟಿಯಿಂದ ಪಂಡಿತ ನೆಹರೂರವರು ಕೈಕೊಂಡ ಸಂಧಾನ ಮಾರ್ಗವು ಸಕಲರಿಂದ ಪ್ರಶಂಸಿಸಲ್ಪಡುತ್ತಿದೆ. ಪಂಡಿತ ಜವಾಹರರು ರಷ್ಯಾದ ಸ್ಟಾಲಿನರಿಗೂ, ಬ್ರಿಟನ್ನಿನ ಅಟ್ಲಿಯವರಿಗೂ, ಅಮೇರಿಕದ ಟ್ರೂಮನರಿಗೂ, ತನ್ನ ಸ್ವಂತ ಜವಾಬ್ದಾರಿಯಿಂದ ಪತ್ರ ಬರೆದೂ ಕೊರಿಯಾ ಸಮಸ್ಯೆಯು ಬಗೆಹರಿಸಲ್ಪಡಬೇಕಾದ ಅನಿವಾರ್ಯಕತೆಯನ್ನು ಮಂಡಿಸಿದ್ದರು. ಈ ಪತ್ರಗಳಲ್ಲಿ ಏನು ಬರೆದಿರುವರೆಂಬುದು ಪ್ರಕಟವಾಗಿದೆ. ರಷ್ಯಾದಲ್ಲಿರುವ ಭಾರತ ರಾಯಭಾರಿ ರಾಧಾಕೃಷ್ಣನ್‌ರವರು ರಷ್ಯಾದ ವಿದೇಶ ಉಪಸಚಿವ ಗ್ರಾಮಿಕೋರವರ ಮೂಲಕ ಸ್ಟಾಲಿನರಿಗೆ ಪತ್ರವನ್ನು ಮುಟ್ಟಿಸಿದ್ದು ಸ್ಟಾಲಿನರು ಉತ್ತರವು ನೆಹರೂರವರಿಗೆ ಬಂದಿದೆ. ಸ್ಟಾಲಿನರು ನೆಹರೂರವರ ಪ್ರಯತ್ನವನ್ನು ಸ್ವಾಗತಿಸಿರುವರು. ಅಮೇರಿಕಾದಲ್ಲಿರುವ ಭಾರತ ರಾಯಭಾರಿ ವಿಜಯಲಕ್ಷ್ಮಿಯವರು ಅಲ್ಲಿಯ ವಿದೇಶ ಸಚಿವ ಎಚೆಸನ್ನರ ಮೂಲಕ ನೆಹರೂರವರ ಪತ್ರವನ್ನು ತಲಪಿಸಿದ್ದಾರೆ. ರಷ್ಯಾ ಅಮೇರಿಕಾಗಳಂಥ ಮಹಾ ರಾಷ್ಟ್ರಗಳನ್ನು ಸೇರಿಸಿ ಒಂದು ಸಂಧಾನ ಮಾಡಿ ಜಗತ್ತಿನ ಶಾಂತಿಗಾಗಿ ಪ್ರಯತ್ನಿಸುವ ಜವಾಬ್ದಾರಿ ಭಾರತಕ್ಕೆ ಬಿದ್ದಿದೆ. ಭಾರತದ ಕಣ್ಣಾಣಿ ಜವಾಹರರ ನೇತೃತ್ವದಲ್ಲಿ ಭರತಖಂಡದ ಘನತೆ ಇನ್ನೂ ಮೇಲೇರಲಿ.

ಕೊರಿಯಾ ಯುದ್ಧವು ಜಗತ್ತಿನ ಯುದ್ಧವಾಗಿ ಪರಿಣಮಿಸುವ ಸಾಧ್ಯತೆ ತೋರಿಬರದಿದ್ದರೂ ಇದರಿಂದ ಜಗತ್ತಿನ ಶಾಂತಿಗೆ ಭಂಗ ಬರಲಾರದೆಂದು ಸ್ಪಷ್ಟ ಹೇಳಬರುವಂತಿಲ್ಲ. ಕೊರಿಯಾ ಯುದ್ಧವು ಪ್ರಪಂಚದ ಯುದ್ಧವಾದೀತು ಎಂಬ ಕಾರಣದಿಂದಲೇ ಜಗತ್ತಿನ ಹಿತವೃಷ್ಟಿಯಿಂದ ನೆಹರೂರವರು ಸಂಧಾನದ ಪ್ರಯತ್ನ ನಡುಮಾಡಿರುವಾಗಿದೆ.

ಮಂತ್ರಿಗಳಿಗೆ ಸ್ನೇಹಿತರಿಲ್ಲ ?!!

ಅಧಿಕಾರದಲ್ಲಿರುವಾಗ ಸುತ್ತುಮುತ್ತು ಸ್ನೇಹಿತರ ಗುಂಪು ಓಲೈಸುತ್ತಿರುತ್ತದೆ. ಅಧಿಕಾರದಿಂದ ಇಳಿದೊಡನೇ ಅವರನ್ನು ಕಾಣುವದೇ ಇಲ್ಲ. ಈ ಮಾತು ಮಂತ್ರಿಗಳಿಗೆ ಹೇಗೆ ಅನ್ವಯಿಸುವದೋ ಹಾಗೆಯೇ ಸರಕಾರಿ ಇತರ ಅಧಿಕಾರಿಗಳಿಗೂ ಅನ್ವಯಿಸುತ್ತದೆ. ಆದರೆ ಅಧಿಕಾರದಿಂದ ಇಳಿಯುವ ಮೊದಲೇ ಈ ದುಸ್ಥಿತಿ ಯಾರಿಗೂ ಬರಬಾರದು! ಮೊನ್ನೆಯೊಗಿವನವಮಹೋತ್ಸವ ನಡೆಯಿತಲ್ಲವೇ? ಅದೇ ಸುದಿನ ಕಾಂಗ್ರೆಸ್ ಪ್ರೆಸಿಡೆಂಟ್ ಡಾ. ಪಟ್ಟಾಭಿಯವರು ಡೆಲ್ಲಿಗೆ ಹೋದರು. ಡೆಲ್ಲಿಯಲ್ಲಿ ಮಂತ್ರಿಗಳಿಂದ ಹಿಡಿದು ಹಲವರು ಗಿಡಗಳನ್ನು ವಿಜೃಂಭಣೆಯಿಂದ ನೆಟ್ಟರು. ಆದರೆ ಕಾಂಗ್ರೆಸ್ ಪ್ರೆಸಿಡೆಂಟರು ಒಂದು ಗಿಡ ನೆಡುವ ಅನವನ್ನು ಯಾರೂ ಮಾಡಲಿಲ್ಲ. ಅವರು ಗಿಡ ನೆಡಲೂ ಇಲ್ಲ. ಕೊರಿಯಾ ಯುದ್ಧದ ಬಗ್ಗೆ ಅವರ ಅಭಿಪ್ರಾಯವನ್ನಾದರೂ ಯಾರೂ ಕೇಳಲಿಲ್ಲ. ಪ್ರೆಸಿಡೆಂಟರ ಗದ್ದುಗೆಯಿಂದ ಇಳಿಯುವ ಮೊದಲೇ ಅವರನ್ನು ಈ ರೀತಿ ಕಡೆಗಣಿಸಲೇಕೆ? ಈ ಹಿಂದೆ 'ಪಟ್ಟಾಭಿಯನರಿಗೆ ಕಾಂಗ್ರೆಸ್ ಅಧ್ಯಕ್ಷತನ ಎಷ್ಟು ಬೇಡವಾಗಿದೆಯೋ ಅಷ್ಟೇ ಅವರು ಅಧ್ಯಕ್ಷರಾಗಿರುವದು ಜನತೆಗೆ ಬೇಡವಾಗಿದೆ' ಎಂದು ಒಮ್ಮೆ ನಾನು ಬರೆದಿದ್ದೆ. ಮೇಲಿನ ವಿಚಾರ ಅದನ್ನು ಸಮರ್ಥಿಸುತ್ತದೆ.

ಕಾಂಗ್ರೆಸ್ಸು ಕೋರ್ಟಿಗೆ!

ಹಿಂದೊಮ್ಮೆ ಕೋರ್ಟ್ ಖರ್ಚೇರಿಗಳಿಗೆ ಬಹಿಷ್ಕಾರ ಹಾಕಿ ಕೋರ್ಟಿನ ಮೊರ ಮೊಕದ್ದಮ್ಮೆಯ ಅರ್ಜಿ ಭಾಗವಹಿಸದ ಕಾಂಗ್ರೆಸಿಗರು ತಮ್ಮ ಜಗಳ ತೀರಿಸಿಕೊಳ್ಳಲು ಕೋರ್ಟಿನ ಶರಣಾಗಿದ್ದಾರೆ ಎಂದರೆ ಕಾಂಗ್ರೆಸ್ಸಿನವರಲ್ಲಾದ ಅವನತಿಗೆ ಬೇರೆ ಕಾರಣ ಕೊಡಬೇಕಿಲ್ಲ. ಕಾಂಗ್ರೆಸ್ಸಿನಲ್ಲಿ ತಿಸ್ತಿಲ್ಲದೆ ಇಂದು ಕಾಂಗ್ರೆಸು ಅಧಿಕಾರಲಾಲಸಿಗಳ ಕಾಳಗದ ಕಣವಾಗಿದೆ! ಕಳೆದ ಪಂಚಾಯ್ತು ಹಾಗೂ ಪ್ರತಿನಿಧಿಗಳ ಚುನಾವಣೆಯಲ್ಲಿ ನಡೆದ ಅವ್ಯವಸ್ಥೆಗಳು ಪ್ರತಿ ಪ್ರಾಂತದಲ್ಲೂ ಗಗನ ಮುಟ್ಟಿವೆ. ಆದ್ದರಿಂದ ಆಂಧ್ರ ಪಶ್ಚಿಮ ಬಂಗಾಳ ಮೊದಲಾದೆಡೆ ಪುನಹ ಚುನಾವಣೆ ನಡೆಯಲಿದೆ. ಚುನಾವಣೆಯಲ್ಲಾದ ಅನಾಹುತಗಳ ಪರಿಣಾಮವಾಗಿ ಅನೇಕರು ಕೋರ್ಟಿನಲ್ಲಿ ಕೇಸುಹೂಡಿರುವರು. ತಾರೀಕು ೧೫ ರಲ್ಲಿ ಡೆಲ್ಲಿಯಲ್ಲಿ ಕೂಡಿದ್ದ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಇದನ್ನು ಪರಿಶೀಲಿಸಿ ಯಾವ ಕಾಂಗ್ರೆಸಿಗನೂ ತನಗಾದ ಹಾನಿಯ ನಿವಾರಣೆಗಾಗಿ ಕೋರ್ಟಿನ ಮರೆಹೋಗಬಾರದೆಂದೂ ಹಾಗೆ ಮಾಡಿದರೆ ಕಾಂಗ್ರೆಸಿನಿಂದ ತೆಗೆದುಹಾಕಲಾಗುವದೆಂದೂ ತೀರಾವು ಮಾಡಿದೆ. ನಮ್ಮ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ಸಿನ ಕಾರ್ಯಕಲಾಪಗಳನ್ನು ವಿಚಾರಿಸುವಂತೆ ಕೇಳಿಕೊಂಡಿದ್ದರಿ ಕರ್ನಾಟಕದಲ್ಲೂ ಮರುಚುನಾವಣೆ ಆಗಬೇಕಿತ್ತು. ಕೆ. ಪಿ. ಸಿ. ಸಿ. ಯು, ಕೊಡಗಿನಲ್ಲಿ ನಡೆಸಿದ ಅನೀತಿಯ ಚುನಾವಣೆ, ಹೊಸ ದುರ್ಗದಲ್ಲಿ ಪರದೇಶಿ ಉಡುವ ಉಮೇದುವಾರರನ್ನು ನಿಲ್ಲಿಸಿ ಹೊಟೇಲಿನಲ್ಲಿ ಅವರಿಗೆ ಖುದ್ದ್ 'ಮೇಕ್‌ಅಪ್' ಮಾಡಿ ಚುನಾವಣೆ ನಡೆಸಿದುದೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ಚುನಾವಣೆಗೆ ಸ್ಥಳೀಕರು ಉಮೇದುವಾರಿಕೆ ಇದ್ದರೂ ಹೊರಗಿನಿಂದ ಉಮೇದುವಾರರನ್ನು ತಂದು ಅವರಿಗೆ ಸೂಚಕರಿಲ್ಲದಿದ್ದರೂ ನಿಯಮಕ್ಕೆ ವಿರುದ್ಧ ಅವರನ್ನು ಆರಿಸಿದ್ದು ಇದೆಲ್ಲಾ ಹೊರಗೆಡಹಲ್ಪಡಬೇಕಿತ್ತು. ಈ ಆಂತರಿಕ ಹುಲಿಗಳಿಂದ ಯಾವ ಹಾನಿಯೂದರೂ ಕನ್ನಡನಾಡಿನ ಮೂಕ ಪರತಪ್ಪ ಜನರಕೂಗು ಎಂದಾದರೂ ಕೇಂದ್ರಕ್ಕೆ ಕೇಳಿಸಿದೆಯೇ?

ಓದುಗರ ಓಲೆಗಳು.

(ಹಿಂದಿನ ಪುಠದಿಂದ ಸಾಗಿದ್ದು)

ಪ್ಪಾಲಿನ ಅತುರದಲ್ಲಿರುವ ಸರಕಾರಿ ಹಾಗೂ ಸಾರ್ವಜನಿಕರಿಗೂ ಉಪಕಾರ ಮಾಡಿದಂತಾಗುವುದು. ಇದಕ್ಕೆ ಸಂಬಂಧಪಟ್ಟ ಪೋಲೀಸು ಮತ್ತು ಟಪ್ಪಾಲು ಇಲಾಖಾಧಿಕಾರಿಗಳು ಜನರ ಅಶೋತ್ತರಗಳನ್ನು ನಡಿಸಿಕೊಡಲು ಮನಸ್ಸು ಮಾಡುವರೆಂದು ನಂಬೋಣವೇ?

'ವಾರ್ತಾ ಸಂಗ್ರಹ'

ನಾಡುಗಳಲ್ಲಿ ಸರ್ವೆ.

ನಾನೊಬ್ಬ ರೈತ. ಹಳ್ಳಿಯ ಬೋರೇಗೌಡರು ಬಡಪಾಯಿಗಳ ಜಾಗವನ್ನು ಸ್ವಲ್ಪ ಸ್ವಲ್ಪ ತಮ್ಮ ಆಸ್ತಿಗೆ ಸೇರಿಸಿ ಬೇಲಿ ಹಾಕಿಕೊಳ್ಳುವುದು ಸಾಮಾನ್ಯವಾಗಿದೆ. ಈ ತಕರಾರಿಗೆ ಕೊನೆ ಮೊದಲಿಲ್ಲ. ಕಳೆದ ಒಂದೆರಡು ವರ್ಷಗಳಿಂದಲೂ ನನ್ನ ಜಾಗದಲ್ಲಿ ಇಂಥಾ ಪ್ರಸಂಗ ನಡೆಯುದರಿಂದ ನಾಡು ಪಾರುಪತ್ತೆಗಾರರಿಗೂ ಸರ್ವೇಯರಿಗೂ ಸಾರಿ ಬರುವಂತೆ ಕೇಳಿಕೊಂಡರೂ ಅವರಿಂದ ಇಂದಿಗೂ ಯಾವ ಪ್ರಯೋಜನವೂ ಆಗಲಿಲ್ಲ. ಅನಂತರ ಆ ಇಲಾಖೆಯ ಮೇಜರ್ಯಧಿಕಾರಿ ನಮ್ಮ ದೇಶದಲ್ಲಿ ಯಾರು ಇದ್ದಾರೋ ಅವರಿಗೆ ಒಂದು ಅರ್ಜಿಯನ್ನು ಕೊಟ್ಟ ಈ ವಿಷಯವನ್ನು ಮನವಿ ಮಾಡಿದನು. ಅವರು ಗ್ರಾಮದ ಸರ್ವೇಯವನಿಗೆ ಒಡನೆ ಹೋಗಲು ಹುಕುಂ ಮಾಡಿದರಂತೆ. ವಳೆ ಹಿಡಿಯುವುದರೊಳಗೆ ಸರ್ವೆ ಮಾಡಿಸಿಕೊಡುವಂತೆ ಕೇಳಿಕೊಂಡಿದ್ದೆನು. ಆದರೆ ತಿಂಗಳು ಎರಡಾದರೂ ಸಾಹೇಬರ ಹುಕುಂ ನೆರವೇರುವುದಾಗಲೀ ನನ್ನ ಅರ್ಜಿಗೆ ಏನಾದರೊಂದು ಜವಾಬು ಆಗಲೀ ಬರಲಿಲ್ಲ. ಸರ್ವೆಯವನಿಗೆ ಎಷ್ಟು ಅತುರದ ಕೆಲಸವಿದ್ದರೂ ಅಧಿಕಾರಿಗಳ ಹುಕುಮಿಗೆ ಇಷ್ಟು ದಿವಸಗಳ ವರೆಗೂ ಬೆಲೆ ಸಲ್ಲದ ಈ ಬೇಜವಾಬ್ದಾರಿಕೆಯ ಸರಕಾರವು ಸರಕಾರವೇ? ನನ್ನ ಹೊಸ ಚೀಫ್ ಕಮಿಷನರರು (ಈಗ ಹಳೆಯವರಾಗಿದ್ದಾರೆ) ಅಲ್ಲಲ್ಲಿ ಗ್ರಾಮಾಂಕ್ಯ—ಅಲ್ಲ; ಊಟಕ್ಕೋ?—ಹೋಗಿದ್ದರೆಂದು ಕೇಳಿದೆನು. ಅವರಿಗೆ ಊಟವನ್ನು ಕೊಟ್ಟವರೊಬ್ಬರ ಜಾಗದ ಬದಿಯಲ್ಲಿ ಸಿಕ್ಕಿಕೊಂಡ ಒಬ್ಬ ರೈತನಿಗೂ ಅವರಿಂದ ಇಂಥಾ ತೊಂದರೆಯಿದೆಯೆಂದು ತಿಳಿದೆನು. ಬಡ ರೈತರ ಚಿಂತೆ ಅಂದಿನಂತೆ ಇಂದೂ ಆದರೆ, ಕೊಟ್ಟ ಅರ್ಜಿಗೆ ಯಾವುದೊಂದು ರೀತಿಯಲ್ಲಿ ಪ್ರತಿಫಲವಿಲ್ಲದಿದ್ದರೆ, ನಮ್ಮ ಆಫೀಸುಗಳು ಅರ್ಜಿಗಳನ್ನು ಅತ್ಯೆತ್ತ ಓಡಿಸಿಕೊಂಡು ಪೋಸ್ಟಾಫೀಸು ಕೆಲಸಗಳನ್ನು ಇಂದೂ ಮಾಡುತ್ತಾ ಇದ್ದರೆ ಅಂಥಾ ಸರಕಾರಕ್ಕೆ ಧಿಕ್ಕಾರ ವಿರಲಿ!

'ರೈತ'

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ವಾರ್ತೆಗಳು.

ಬರುವ ಮಹಾ ಚುನಾವಣೆಗಳಲ್ಲಿ ಹಿಂದೂ ಮಹಾಸಭೆಯು ಇತರ ಪಕ್ಷಗಳೊಡನೆ ಸಹಕರಿಸಿ ರಾಷ್ಟ್ರದ ಹಿತಕ್ಕಾಗಿ ಸ್ಪರ್ಧಿಸುವುದು ಎಂಬುದಾಗಿ ಅಖಿಲ ಭಾರತ ಹಿಂದೂ ಮಹಾಸಭೆಯ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ವಿ. ಜಿ. ದೇಶಪಾಂಡೆಯವರು ತಿಳಿಸಿದರು. ಹಿಂದೂ ಮಹಾಸಭೆಯು ರಾಜಕೀಯ ಪಕ್ಷವಾಗಿ ವರ್ತಿಸುವುದು. ಕಾಂಗ್ರೆಸ್ಸಿಗೆ ಪ್ರತಿಯಾಗಿ ಸ್ಪರ್ಧಿಸಲು ಸಂಯುಕ್ತ ಪ್ರತಿಪಕ್ಷ ರಚಿಸುವುದು ಎಂದರು.

ಕಾಶ್ಮೀರದ ಸಮಸ್ಯೆ ಬಗ್ಗೆ ಪೂತಕತೆ ನಡೆಸಲು ಜುಲೈ ೨೦ರಲ್ಲಿ ಡೆಲ್ಲಿಯಲ್ಲಿ ನೆಹರು-ಲಿಯಾಖತ್ ಅಲಿಖಾನ್ ಮತ್ತು ಪ್ರಪಂಚ ಸಂಸ್ಥೆ ನಿಯೋಗದವರಾದ ಸರ್ ಓವನ್ ಡಿಕ್ಸನ್ ಇವರುಗಳ ಸಮ್ಮೇಳನ ನಡೆಯಬೇಕೆಂದು ಸೂಚಿಸಲಾಗಿದೆ.

ಕಾಂಗ್ರೆಸ್ ಅಧ್ಯಕ್ಷಪದವಿಗೆ ಶ್ರೀ. ಶಂಕರರಾವ್ ದೇವ್‌ರವರು ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸಂಭವವಿದೆ. ಸಾಮಿಕ ದಲ್ಲಿ ಜರಗಲಿರುವ ಮುಂದಿನ ಏ. ಐ. ಸಿ. ಸಿ. ಅಧಿವೇಶನ ಸಪ್ಟೆಂಬರ್ ಒಂದನೇ ವಾರದ ವರೆಗೆ ಮುಂದೂಡಲ್ಪಡಬಹುದೆನ್ನಲಾಗಿದೆ.

ಭಾರತದ ರಾಜಧಾನಿ ದೆಹಲಿಯಲ್ಲಿ ನೂತನ ಪಾರ್ಲಿಮೆಂಟ್ ಭವನವೊಂದು ರಚನೆಯಾಗುತ್ತಿದೆಯಷ್ಟೆ. ಈ ಮುಂದಿರಕ್ಕೆ ಅತ್ಯಾಧುನಿಕ ವಿದ್ಯುತ್ ಸೌಕರ್ಯ ಮತ್ತು ಹೆಚ್ಚಿಗೆ ಸೌಕರ್ಯಗಳನ್ನು ಒದಗಿಸುವ ಏರ್ಪಾಡು ನಡೆದಿದೆ-ಅಲ್ಲದೆ ಶೇಕಡ ೭೮ ರಷ್ಟು ಸದಸ್ಯರಿಗೆ ಸೀಟುಗಳ ವ್ಯವಸ್ಥೆಯೂ ಮಾಡಲಾಗುವುದು. ದೇಶದಲ್ಲಿ ಸಾಮಾನ್ಯ ಚುನಾವಣೆಗಳು ನಡೆದ ನಂತರ ಪ್ರಜೆಗಳ ಸಭೆಯು ಈ ಮುಂದಿರದಲ್ಲಿ ಕೂಡಬೇಕು.

ಜಾವಾ ಮತ್ತು ಸುಮಾತ್ರಾಗಳ ನಡುವೆ ಇರುವ ರಾಕ್ಷಸಾಕಾರದ ಜ್ವಾಲಾಮುಖಿ ಕ್ರೆಕೊಟೊ ಇತ್ತೀಚೆಗೆ ಲಾವಾಕಾರಿ ಹಲವು ಮೈಲುಗಳನ್ನು ದೂರಕ್ಕೆ ಕಲ್ಲು ಮಣ್ಣುಗಳನ್ನು ಹಾರಿಸಿದೆ. ೧೮೮೩ರಲ್ಲಿ-ಜ್ವಾಲಾಮುಖಿಯು ಸ್ಫೋಟನದಿಂದ ಕ್ರೆಕೊಟೊ ದ್ವೀಪವು ಮೂರು ಭಾಗವಾಗಿತ್ತು. ಆಗ ಈ ಮೊದಲು ಎಂದೂ ಕೇಳದ ಮಹಾ ಭಯಂಕರ ಶಬ್ದ ಉಂಟಾಗಿತ್ತಂತೆ ಬರೇ ಎರಡು ವಾರಗಳ ಹಿಂದೆ ಇಂಡೋನೇಶ್ಯದ ಅಧ್ಯಕ್ಷ ಡಾ. ಸೊಯು ಕೊರ್ನೊರವರು ಈ ಜ್ವಾಲಾಮುಖಿ ಸ್ಥ ದೇಶಕ್ಕೆ ವಿಮಾನದಲ್ಲಿ ಸಂದರ್ಶನವಿತ್ತಿದ್ದರು. ಆಗ ಅದು ಶಾಂತವಾಗಿತ್ತು.

ಬೆಂಗಳೂರಿನಲ್ಲಿಯ ಸರಕಾರೀ ವಿದ್ಯುತ್ ಕಂಪೆನಿಯು ೧೯೦೦ ಕೆಲಸಗಾರರು ೧೦ನೇ ದಿನಾಂಕ ಮುಂಜಾವಿನಿಂದ ಸಂಪು ಹೂಡಿರುವರು. ಈ ಮೊದಲು ಎಂಡಿಕೊಂಡ ಒಡಂಬಡಿಕೆಯನ್ನು ಜಾರಿಯಲ್ಲಿ ತುದಿಲ್ಲ. ಒಂದು ತಿಂಗಳ ಸಂಬಳವನ್ನು ಬೋನಸ್ಸು ಎಂದು ಕೊಡಬೇಕೆಂದು ಮಾಡಿಕೊಂಡ ಕರಾರಿನಂತೆ ನಡೆದಿಲ್ಲ ಎಂಬುದೇ ಸಂಪಿಗೆ ಕಾರಣವಂತೆ.

ಜುಲೈ ತಾ. ೧೫ರಿಂದ ಹೊಸ ಒಂದಾಣೆ ಅಂಚೆಚೀಟುಗಳು ಭಾರತ ಸರಕಾರದ ಕಡೆಯಿಂದ ಚಲಾವಣೆಗಿಳಿಸಲ್ಪಟ್ಟಿವೆ ಈ ಚೀಟುಗಳಲ್ಲಿ ಈ ಮೊದಲಿನ 'ಬೋಧಿವೃಕ್ಷದ' ಆಕೃತಿಯೇ ಇದ್ದು ಅದನ್ನು ಸರಿಯಾದ ಆಸನದಲ್ಲಿ ಅಚ್ಚುಹಾಕಲಾಗಿದೆ. ಈ ನೊದಲಿನ ಅಂಚೆಚೀಟುಗಳಲ್ಲಿದ್ದ ಆಸನ ಸರಿಯಲ್ಲ, ಈ ಮೊದಲು ಅಚ್ಚುಹಾಕಲ್ಪಟ್ಟ ಒಂದಾಣೆ ಅಂಚೆಚೀಟುಗಳು, ಪೂರ್ಣ ಸ್ಟಾಕ್ ಮುಗಿಯುವವರೆಗೆ ಚಲಾವಣೆಯಲ್ಲಿರುವವು.

ಸಂಯುಕ್ತ ಅಮೇರಿಕವು ಯಾವುದೇ ಮಿಲಿಟರಿ ಅಭ್ಯಂತರಗಳನ್ನು ತಂದೊಡ್ಡಲಿ. ತಾವು ಟೈವಾನ್ (ಫೊರ್ಮೊಸಾ) ಬಂಧ ಮಾಡಿಕ್ಕಗೊಳಿಸುವುದು ನಿಶ್ಚಯ ಎಂಬುದಾಗಿ ಚೀನಿ ಕಮ್ಯೂನಿಸ್ಟರು ಸಂಯುಕ್ತ ಜನಾಂಗಗಳನ್ನು ಎಚ್ಚರಿಸಿವೆ.

ಮೈಸೂರಲ್ಲಿಯ ವೃಂದಾವನ ತೋಟದಲ್ಲಿ ೧೫ನೇ ದಿನಾಂಕದಿಂದ ಅಂತರರಾಷ್ಟ್ರೀಯ ವಿಶ್ವ ವಿದ್ಯಾಲಯ ಪರಿಷತ್ತು ಪ್ರಾರಂಭವಾಗಿದೆ. ಇದಕ್ಕಾಗಿ ಹಾವರ್ಡ, ಪ್ರಾಶಿಂಗ್‌ಟನ್, ಮಿಸ್ಸೂರಿ ಮೊದಲಾದ ವಿಶ್ವವಿದ್ಯಾಲಯಗಳಿಂದ ಈ ವರೆಗೆ ಒಟ್ಟು ೨೬ ಪ್ರತಿನಿಧಿಗಳು ಬಂದಿರುವರು.

ಮಂಗಳೂರು 'ಅರುಣ' ಪತ್ರಿಕೆಯು ತಾ. ೨೬-೨-೫೦ರಂದು ಸೇಲಂ ಜೈಲಿನೊಳಗಿನ ಗೋಳಿಬಾರಿನ ಕುರಿತು ಬರೆದ ಲೇಖನಕ್ಕಾಗಿ ಸಂಪಾದಕ ಮತ್ತು ಪ್ರಕಾಶಕರಾದ ಶ್ರೀ ಯು. ಎಸ್. ಭಟ್ಟರಿಂದ ೧ ಸಾವಿರ ಮತ್ತು ವಂದ್ರಕರಾದ ಜಯ ಭಾರತ ಪ್ರೆಸ್ಸಿನವರಿಂದ ೧ ಸಾವಿರ ರೂಪಾಯಿಗಳ ಜಾಮೀನನ್ನು ಮದ್ರಾಸು ಸರಕಾರವು ಕೇಳಿರುವುದು.

ಭಾರತ ಸರಕಾರದವರು ಮಂಗಳೂರಿನಲ್ಲಿ ವಿಮಾನ ನಿಲ್ದಾಣವನ್ನು ಕಟ್ಟಲು ಯೋಚಿಸಿ ನಾಗರಿಕ ವಿಮಾನ ಶಾಖೆಯ ಉಚ್ಚ ಅಧಿಕಾರಿಗಳಿಗೆ ವಿಮಾನ ನಿಲ್ದಾಣಕ್ಕೆ ಯೋಗ್ಯ ಸ್ಥಳ ಆರಿಸಲು ಕೇಳಿದ್ದಾರೆಂದು ತಿಳಿಯುತ್ತದೆ. ಈ ಅಧಿಕಾರಿಗಳು ಈಗಾಗಲೇ ಮಂಗಳೂರಿಗೆ ಹೋಗಿ ಸ್ಥಳ ನೋಡಿ ಹಿಂತಿರಳಿರುವರು.

ಪಾಕಿಸ್ತಾನದ ಮುಖ್ಯ ಮಂತ್ರಿಗಳಾಗಿರುವ ಜನಾಬ್ ಲಿಯಾಖತ್ ಅಲಿಖಾನರು ಪತ್ನಿ ಪರಿವಾರ ಸಹಿತವಾಗಿ ಕರಾಚಿಗೆ ಮರಳಿ ಬಂದಿರುವರು.

ಬರುವ ಜುಲೈ ೩೧ರಿಂದ ೧೦ ದಿನಗಳವರೆಗೆ ಭಾರತ ಸಂಸತ್ತಿನ ವಿಶೇಷ ಅಧಿವೇಶನವನ್ನು ಕೂಡಿಸಲಾಗುವುದೆಂಪು ಅಧಿಕೃತವಾಗಿ ತಿಳಿಯುತ್ತದೆ. ಕೊರಿಯಾ ಯುದ್ಧದ ಬಗ್ಗೆ ಭಾರತ ಸರಕಾರದ ನಿಲುವಿಯನ್ನು ವಿಚಾರಿಸುವುದು ಅಧಿವೇಶನದ ಮುಖ್ಯ ಉದ್ದೇಶವಾಗಿದೆ. ಈ ಅಧಿವೇಶನದ ಪ್ರಾರಂಭಕ್ಕೆ ರಾಷ್ಟ್ರಪತಿಗಳು ಭಾಷಣ ಮಾಡಲಿರುವರು. ಆ ಭಾಷಣದಲ್ಲಿಯ ಧೋರಣೆಯ ಬಗ್ಗೆಯೇ ಬಹುಶಃ ಚರ್ಚೆ ನಡೆಯುವುದು. ಪ್ರಶ್ನೋತ್ತರಗಳ ಬಗ್ಗೆಯೂ ಕೆಲ ದಿನಗಳ ಸಮಯವೂ ಕೊಡಲಾಗುವುದು.

ಮುಂಬಯಿ ಕೇಸ್‌ಕೋರ್ಸಿನ ಹತ್ತಿರ ಮಹಾಲಕ್ಷ್ಮೀ ದೇವಸ್ಥಾನದ ಪೂಜಾರಿಯ ಮೇಲೆ ಯಾರೋ ಇಬ್ಬರು ಪಿಸ್ತೂಲಿನಿಂದ ಧಾಳಿ ಮಾಡಿ ೫೦೦೦ ರೂಪಾಯಿಗಳ ಆಭರಣಗಳನ್ನು ದೋಚಿಕೊಂಡು ಹೋಗಿರುವರು. ಪೂಜಾರಿಗೆ ಗಾಯ ಸಂಭವಿಸಿದ್ದು ಅವನನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಈ ಸಂಬಂಧದಲ್ಲಿ ನಾಲ್ವರನ್ನು ಸೆರೆ ಹಿಡಿಯಲಾಗಿದೆ.

(ಎನೇ ಪುಠದಿಂದ ಸಾಗಿದ್ದು)

ದೆ. ಸಂಗಡವೇ ಭೀಷಣ ಬಡತನ ಮತ್ತು ದಾರಿದ್ರ್ಯದಲ್ಲಿ ತಮ್ಮ ದೇಶದಲ್ಲಿ ಕೆಲಜನರು ಹಣದ ರಾಶಿಯ ಮೇಲೆ ಹೊರಳಾಡುತ್ತ ನಿದರ್ಶಯ ಸ್ವಾರ್ಥದಿಂದ ಸರಕಾರಗಳನ್ನು ತಮ್ಮ ಕೈಯೊಳಗಿಟ್ಟುಕೊಂಡಿರುವುದೂ ಅದಕ್ಕೆ ಕಾರಣವಾಗಿದೆ.

ಯೂರೋಪ್ ಅಮೇರಿಕಗಳ ಪ್ರಜಾತಂತ್ರ ರಾಷ್ಟ್ರಗಳಿಗೆ ರಷಿಯವನ್ನು ಸದೆಬಡೆಯುವುದು ಅಸಾಧ್ಯವಾಗದಿರಬಹುದು. ಆದರೆ ಅಲ್ಲಿಗೆ ಕಾಟ ತೀರಿತೆಂದಾಗದು. ಕಮ್ಯೂನಿಜವಿನಲ್ಲಿರುವ ಸತ್ಯಾಂಶದ ಬಲದಿಂದ ಅದು ಆವರ ದೇಶಗಳಲ್ಲಿಯೇ ತಲೆ ಎತ್ತುವುದು. ಕಮ್ಯೂನಿಜವಿಗೆ ಒಂದೇ ಒಂದು ಪರಿಣಾಮಕರ ಪರಿಹಾರವೆಂದರೆ ಸ್ವೇಚ್ಛೆಯಿಂದ ಬಂಡವಾಳಶಾಹಿ ಅರ್ಥ ಪದ್ಧತಿಯನ್ನು ಕಿತ್ತು ಹಾಕುವುದು ಮತ್ತು ಜೀವನ ಮಟ್ಟವನ್ನು ಇಳಿಸಿ ದಟ್ಟವಾದ ಜನಸಂಖ್ಯೆಯಿರುವ ದೇಶಗಳ ಜನರನ್ನು ಭೂಮಿಯ ನಿರ್ಜನ ಪ್ರದೇಶಗಳಲ್ಲಿ ಹಬ್ಬಲು ಅವಮಂತ್ರಿಸುವುದು.

ಶುದ್ಧ ತಾಟಸ್ಥ್ಯ ಇಳಿಲಿ.

ಅಡಂತಿರಲಿ, ಆದರೆ ಅಮೇರಿಕವಾಗಲಿ ರಷಿಯವಾಗಲಿ ಒಂದಲ್ಲ ಒಂದು ಗುಂಪಿಗೆ ಧನಸಹಾಯವನ್ನಾಗಲಿ, ಆಯುಧ ಸಹಾಯವನ್ನಾಗಲಿ ಕಾಂತ್ರಿಕ ಜನಸಹಾಯವನ್ನಾಗಲಿ ಏಕೆ ನೀಡಬೇಕು? ಜಗತ್ತಿನಲ್ಲಿ ಶಾಂತಿಯನ್ನು ಕಾಪಾಡುವುದೇ ಆವರ ಉದ್ದೇಶವಾಗಿದ್ದಲ್ಲಿ ಅವರು ಮೊಟ್ಟಮೊದಲು ಘಾತಕ ಆಯುಧಗಳಲ್ಲಿ ವ್ಯಾಪಾರ ಮಾಡಲು ನಿರಾಕರಿಸಬೇಕು ಮತ್ತು ತಮ್ಮ ತಾಂತ್ರಿಕ ತಜ್ಞರನ್ನು ಹೊರ ದೇಶಗಳಿಗೆ ಎರವು ಕೊಡಬಾರದು. ರಷಿಯಾ-ಅಮೇರಿಕ ಇವರಡೂ ಜಪಾನು ಮತ್ತು ಕೊರಿಯಗಳಿಂದ ತಪ್ಪು ಆಯುಧಗಳನ್ನೂ ತಂತ್ರಜ್ಞರನ್ನೂ ತರಬೇಕು ಕೊಡುವವರನ್ನೂ ಕೊಡಿಕೊಂಡು ಹೊರಟು ಹೋಗಲಿ. ಕೊರಿಯನ್ನರು ಹೊರಗಿನವರ ಹಸ್ತಕ್ಷೇಪವಿಲ್ಲದೆಲೇ ತಮ್ಮ ಜಗಳವನ್ನು ತೀರ್ಮಾನಿಸಿಕೊಳ್ಳಲಿ. ಉಭಯ ಕೊರಿಯಗಳು ತಂತಮ್ಮ ಆಸೈಸರ್ಗಿಕ ಗಡಿಗಳೊಳಗೇ ಉಳಿಯುವಂತೆ ಮಾಡಿದರೆ ಸಾರ್ಥಕವಾಗಲಿಲ್ಲ. ಆ ಗಡಿಯನ್ನು ಪೂರಾ ತೆಗೆದು ಬಿಟ್ಟು ದೇಶವನ್ನು ಒಂದುಗೂಡಿಸುವುದೀಗ ಬೇಕಾಗಿದೆ. ಪ್ರಬಲ ರಾಷ್ಟ್ರಗಳಿಗೆ ಏಷಿಯದ (ಭಾರತವನ್ನೊಳಗೊಂಡು) ಮೇಲೆ ಪ್ರೀತಿ ಇರುವುದು ನಿಜವಾದರೆ, ಸ್ವಾಭಾವಿಕ ಪ್ರದೇಶಗಳನ್ನು ದ್ವಿಭಾಗಿಸುವ ತ್ರಿಭಾಗಿಸುವ ಈ ವ್ಯಾಪಾರ ಕೂಡಲೇ ನಿಲ್ಲಬೇಕು. ಪಾಕಿಸ್ತಾನಿಗಳು, ಪಂಜಾಬಿಗಳು, ಬಂಗಾಳಿಗಳು ಕಾಶ್ಮೀರಿಗಳು, ಭಾರತೀಯರು, ಇಂಡೋನೇಶ್ಯನ್ನರು, ಕೊರಿಯನ್ನರು-ಇವರೆಲ್ಲರೂ ವಿಭಜನೆಯ ಸುಖವನ್ನು ಸಾಕಷ್ಟು ಅನುಭವಿಸಿದ್ದಾರೆ. ಈ ದೇಶಗಳ ಜನರಲ್ಲಿ ಸೌಹಾರ್ದವನ್ನು ಬೆಳೆಸುವುದು ಪ್ರಬಲ ರಾಷ್ಟ್ರಗಳ ಕೈಲಾಗದಿದ್ದರೆ ಅವರು ಕನಿಷ್ಟ ಆಯೂ ಪ್ರದೇಶದ ಜನರನ್ನು ಅವರವರ ಪಾಡಿಗೆ, ಅವರವರ ಸಾವು ಧ್ಯರ್ಕ್ಕೆ ಬಿಟ್ಟು ಬಿಡಲಿ. ಅವರಿಗೆ ಬಂಧು ಹತ್ಯೆ ಹೊರತು ಬೇರೇನೂ ಜಾರದಿದ್ದರೆ ಅದನ್ನೇ ಮಾಡಿಕೊಳ್ಳಲಿ. ಸಂ. ರಾ. ಸಂಘವು ಪ್ರವೇಶಿಸಬೇಕಾದ್ದು ತೋರಿಕೆಯ ಶಾಂತಿಯನ್ನು ಸ್ಥಾಪಿಸುವ ಕೆಲಸಕ್ಕಲ್ಲ. ಈ ನೈಸರ್ಗಿಕ ಪ್ರದೇಶಗಳ ಜನರಲ್ಲಿ ಸೌಹಾರ್ದವನ್ನು ಬೆಳೆಸಲಿಕ್ಕಾಗಿ. ಅದು ಸಾಧ್ಯವಿಲ್ಲದಿದ್ದರೆ ಆಯೂ ನೈಸರ್ಗಿಕ ಪ್ರದೇಶಕ್ಕೇ ಕಲಹವನ್ನು ಮಿತಗೊಳಿಸುವುದು ಎಡನೆ ಅತ್ಯುತ್ತಮ ಉಪಾಯ. ಇದು ಸಾಧ್ಯವಾಗಬೇಕಾದರೆ ಪ್ರಬಲ ರಾಷ್ಟ್ರಗಳು ಏಶಿಯದಿಂದ ಹೊರಬೀಳಬೇಕು ಮತ್ತು ತಮ್ಮ ಶಸ್ತ್ರಾಸ್ತ್ರಗಳೆನ್ನೂ ಕರ್ಮ ಚಾತುರ್ಯವನ್ನೂ ಜಗಳಾಡುವ ದೇಶಗಳಿಗೆ ಮಾರಲು ನಿರಾಕರಿಸಬೇಕು.

"ಹರಿಜನ"

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕು ಲಿಮಿಟೆಡ್
ಮಡಿಕೇರಿ. ತಾ. 12—7—50.

ಪ್ರಕಟಣೆ.

ಈ ಮೊದಲೇ ಮಹಾಸಭೆಯಲ್ಲಿ ನಿರ್ಣಯಿಸಿದ ಮೇರೆ, ತಾ. 9-7-50ರಲ್ಲು ಈ ಬ್ಯಾಂಕಿನ ಆಶ್ರಯದಲ್ಲಿ ದೀರ್ಘವಾಯಿದೆಯ ಶಾಖೆಯೊಂದನ್ನು ಕೊಡಗಿನ ಚೇರ್‌ಮನ್ ಕವಿಷನರವರಿಂದ ತೆರೆಯಲಾಗಿದೆ. ಹೆಚ್ಚಿನ ಬೆಳೆ ಬೆಳೆಸುವದು, ಭೂಮಿ ರೂಪಿತ, ಸಾಲ ನಿವಾರಣೆ ಇತ್ಯಾದಿ ಉಪಯುಕ್ತವಾದ ಉದ್ದೇಶಗಳಿಗೆ 20 ವರ್ಷಗಳ ಮರುಪಾವತಿಯ ಶರತ್ತಿನಲ್ಲಿ ಜಮೀನು ಅಡಮಾನದ ಆಧಾರದ ಮೇಲೆ ದೀರ್ಘ ವಾಯಿದೆಯ ಶಾಖೆಯಿಂದ ಸಾಲ ಕೊಡುವ ಏರ್ಪಾಡು ಮಾಡಲಾಗಿದೆ. ಇಂಥಾ ಸಾಲ ಪಡೆಯಬೇಕೆಂದಿಚ್ಛಿಸುವವರು ಮೊದಲಾಗಿ ಗ್ರಾಮ ಸಹಕಾರ ಸಂಘಗಳಲ್ಲಿ ಮೆಂಬರುಗಳಾಗಿದ್ದರೆ ಅವುಗಳ ಮೂಲಕ ಅರ್ಜಿ ಬರಕೊಳ್ಳಬಹುದು. ಎಲ್ಲಾ ಸಹಕಾರ ಸಂಘಗಳ ಪ್ರೆಸಿಡೆಂಟರು ಅಂಥಾ ಅರ್ಜಿಗಳು ಬಂದರೆ ಒಡನೆ ಕಾರ್ಯಕಾರಿ ಮಂಡಳಿಯವರ ಸಲಹೆಯೊಡನೆ ತಡಮಾಡದೆ ಈ ಬ್ಯಾಂಕಿಗೆ ಕಳಿಹಿಸಬೇಕಾಗಿ ವಿನಂತಿ.

ಸಾಲದ ಅರ್ಜಿ ಫಾರಂಗಳು ಮತ್ತು ಸಾಲ ಪಡೆಯುವ ಮೊದಲು ತಾನು ಕೊಡಬೇಕಾದ ಇತರ ಖತಾಯಿತಿಗಳ ವಿಷಯ ಕುರಿತು ಹೆಚ್ಚಿನ ವಿವರಗಳನ್ನು ಬ್ಯಾಂಕು ಆಫೀಸಿನಿಂದ ಪಡಕೊಳ್ಳಬಹುದು. ಈ ಸಾಲಕ್ಕೆ ಬರತಕ್ಕ ಎಲ್ಲಾ ಅರ್ಜಿಗಳ ಪೈಕಿ ಆಡಮಾನ ಮಾಡಲಿರುವ ಜಮೀನುಗಳ ಬೆಲೆ ವತ್ತು ಸಾಲದ ಉದ್ದಿಶ್ಯಗಳನ್ನು ನೋಡಿ ಅರ್ಹತೆ ಇರುವ ಸಾಲದ ಅರ್ಜಿಗಳನ್ನ ಕಾಲಾಂತರವಾಗಿ ಅಡಮಾಯಿಸಿಕೆ ನಡೆಸಿದ ನಂತರ, ಈ ಬಗ್ಗೆ ವಿಚಾರಿಸಿರುವ ಬೈಲಾಗಳಿಗನುಸಾರವಾಗಿ ಸಾಲ ಕೊಡಲಾಗುವುದು.

ಕೆ. ಪಿ. ಅಪ್ಪಯ್ಯ, ಎಂ. ಎಲ್. ಸಿ.
ಪ್ರೆಸಿಡೆಂಟ್.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 218-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಆವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–44

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾಪ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಜಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದಲ್ಲ. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೇಡಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ವಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ENTERTAINING FAMILY & FRIENDS EASY NOW!!

NOODLE OR NOOPUTU (ಸೇವಿಗೆ)

making with this all BRASS easy handling Machine in a Variety of Sizes and Shapes is a boon to House wives.



52–5 *Rs. 23 8 (Postage extra,)*

GOBIND & CHENGPA,
22. CANNING STREET, CALCUTTA.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ.	6,13,00,000 ರೂಪಾಯಿ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ.	27,73,00,000 ,,
ಒಟ್ಟು ನಿಧಿ. ರೂ.	8,30,00,000 ,,
ಸಾಪಿತವಾದಂದಿನಿಂದ ಪಾಲಿಸಿದಾರರಿಗೆ ಕೊಟ್ಟ ಕ್ಲೈಮುಗಳು	10,16,00,000 ,,

1,28,000 ಕ್ಕೂ ಹೆಚ್ಚು ಕುಟುಂಬಗಳಿಗೆ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಶಾಖಾ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಭದ್ರತೆ! 17 ವರ್ಷಗಳ ಅನುಭವಶೀಲತೆ!! ಅನುಕೂಲತೆ!!

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಖಜೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರು

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:— ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮಿಗಿದೆ.

ಎಲ್ಲಾ ವಿಧದ ಆಧುನಿಕ ಬ್ಯಾಂಕ್ಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಮ್ಯಾನೇಜರ್,
ಮಡಿಕೇರಿ ಶಾಖೆ, ಮಡಿಕೇರಿ.

ದಿ ಟ್ರೋಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಖಜೇರಿ:— ಹೊಸದಿಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯು. ಆಚ್ಚಣ್ಣ, ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.
ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.

The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today

Head Office:
MANGALORE
26–11

K. M. Bopaiah, Esq,
Branch Secretary for Mysore & Coorg,
85 Sultanpet, BANGALORE 2.

Edited, Printed and Published by P. I. Belliappa at 'Kodagu Press, Mercara, for 'Kodagu' Ltd.